(MR. SPEAKER).

ಸಭೆಯು ಅತ್ಯಂತ ಪ್ರೀತಿ ಗೌರವಪೂರ್ವಕವಾದ ಅಭಿನಂದನೆಗಳನ್ನು ಸಲ್ಲಿಸುತ್ತದೆ ಮತ್ತು ರಾಜಕುಮಾರರಾದ ಶ್ರೀ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಬಹದ್ದೂರ್ ಅವರಿಗೆ ಭಗವಂತನು ದೀರ್ಘಾಯುರಾರೋಗ್ಯೈಶ್ವರ್ಯಾದಿ ಸಮಸ್ತ ಸನ್ಮಂಗಳಗಳನ್ನು ಕೃಪೆಮಾಡಲೆಂದು ಭಕ್ತಿಯಿಂದ ಪ್ರಾರ್ಥಿಸುತ್ತದೆ."

The Resolution was adopted unanimously.

CONDOLENCE REFERENCES.

Sri A. G. RAMACHANDRA RAO (Leader of the House).—Sir, I beg leave on behalf of the House to make a brief reference to the sense of poignant grief and sorrow that has filled the country by the sad demise of Marshal Stalin, the Premier of the Soviet Republic. He was the right-hand man of Lenin, the architect of Soviet Russia and became the Premier in 1924. During this long period, he has been one of the potent forces in world politics. True, a great part of the world differ from him, but he was always a factor to be seriously counted during the period. His memory will be cherished long in the world history.

We have sustained severe loss in the death of Sri N. Gopalaswamy Iyengar who was an able administrator and astute statesman and one of the important personalities that moulded our great Constitution. After a successful career in the Indian Civil Service, he became the Prime Minister of Kashmir and his services in the solution of the Kashmir problem were of very great value and the void created by his loss cannot be easily filled up. As Minister for States and Railways, he showed a remarkable constructive capacity and we deeply mourn his loss.

Coming to our own State, we miss Sri Shankarlinge Gowda who has been a member of this House for a long time. His ready wit and humour kept the House lively. His statistics was a problem for many to digest and his natural and vigorous expression of views used to be most welcome. We all deeply mourn his loss.

Even so, we mourn the demise of Messrs. Krishnaswamy Pillay and Pathi Basappa — two Honourable Members of this House who ably served the country during their membership.

In respect of the memory of these eminent people, may we express our great regard for all of them by standing for a few minutes and offering silent prayer for their departed souls.

***Sri J. MOHAMED IMAM** (Jagalur).—I had sent two resolutions bearing on the same matter and including something more, about Stalin's death—not only to mourn his loss but also to adjourn this House as a mark of respect to his memory. There is that resolution also.

Mr. SPEAKER.—Anyhow you did not bring it to my notice earlier. The Leader of the House has already moved his motion. We will stick to it.

Sri J. MOHAMED IMAM.—They have been sent to you before 10 o'clock.

Sri S. SRINIVASA IYENGAR (T.-Narasipur).—The resolutions have been sent to the office within 10 o'clock.

Mr. SPEAKER.—I did not receive them. He has brought it to my notice just now. Anyhow, there is that motion before the House.

Sri J. MOHAMED IMAM.—Sir, it is with profound sorrow that I have to second the resolution brought by the Leader of the House. In one resolution, he has referred to the demise of two great personalities, *viz.*, Marshal Stalin and Sri N. Gopalaswami Iyengar and three other members of this House and it will take some time for me to dilate on the qualities of each person.

As pointed out by the Leader of the House, Marshal Stalin was a world personality who infused new ideas and who gave a new and a definite orientation to the world and he infused a kind of spirit in the youth of the country. We may or may not agree with his views, but we must agree with this, that he was a great personality to be

reckoned and to be honoured and to be respected, because he had a great hand in moulding the destiny of the entire world. In one way we must be grateful to him and we are directly concerned with him. He was one of the three or four great leaders that saved the world from the Nazi tyranny and who upheld democracy and saved it for the sake of the world. In that respect, I think the whole world must be grateful to him. That is why we are showing a very reverent feeling towards him because he was not only a great personality but he had a direct and active hand in saving democracy for the world and in saving the world from falling into the clutches of Nazism or Fascism. That is why in this respect I had sent a resolution wherein I have said that as a mark of respect to the memory of this great man, it is but meet that we do adjourn for to-day. And I may also point out that in the Parliament of India, when a similar resolution was brought they suspend all further work for that day and adjourned. Similarly, other State Legislatures like the Legislatures of Hyderabad and Patna, when they moved it, suspended further work and adjourned the business of the House as a mark of respect. It is but right that we adjourn the deliberations of to-day as a mark of respect to this great man.

I associate myself with the sentiments in regard to the other personalities to whom the Leader of the House has referred. I join with him in offering our sympathy to the family of Sri N. Gopalaswamy Iyengar. He was a great statesman. He did yoeman service to the Government of India. As pointed out by Pandit Nehru, he was one of the soundest advisers to the Government of India. Both the Prime Minister and the President took his advice before launching on any scheme. It is a great loss to the country and his unexpected passing away is a great blow.

Coming to our own affairs, we all feel sad that we miss today from our midst the familiar and cheerful face of our dear old friend Sri Sankara Linge Gowda. Some of us know him from a very long time. I had the privilege of working with him in the Legislatures for over twenty to twenty-five years. He has served Mysore for over a quarter of a century and has served her faithfully. By himself, he was a very experienced politician. He knew all the economic aspects of life and he was a good politician in his own way. It is not only here, but he served in the other parts of the country also—Indore and other places where he served as economic adviser. It must be admitted that he was a lover of the country and a lover of the people and his sole aim was to do good to the people and especially to the common man. After the recent elections, he served his constituency only on two occasions. He would set the entire House into laughter, or by serious remarks sometimes, he would make us weep. We have lost a good Mysorean who served his country and his sudden loss is a great blow. Still it cannot be helped What we can do is only to convey to the members of the bereaved family the sympathies of this House and also to adjourn this House as a mark of respect to his memory.

Coming to Sri Pathi Basappa and Sri Krishnaswamy Pillay—Sri Pathi Basappa is my own district man. He served the Assembly for over twenty years. His services were recognised and a Public Service Medal was awarded to him. He was a man of honour and he served the State not only as a member of the Assembly but also as a member of the District Board and in various other capacities. We deeply mourn his loss. It is unfortunate that we have to lose him so early and so also Sri Krishnaswamy Pillay. I remember his bull dog voice and his scathing criticisms of the Government sometimes, and sometimes he supported the Government also. He was a very lovable and a very good personality. It is a misfortune that we have to move so many condolence motions at the beginning of this Session of the House,—from Marshal Stalin to Sri Krishnaswamy Pillay. To show our respect to all these persons I do pray and appeal to this House to accept my

(SRI J. MOHAMED IMAM).

motion. We will not lose much by following the example set by the Central House of the people and by other Legislatures of the States, who adjourned immediately after passing the condolence resolution. With these words, I place this amendment before this House for their consideration.

ಶ್ರೀ ಮುಲ್ಕ ಗೋವಿಂದರೆಡ್ಡಿ (ಚಿತ್ರದುರ್ಗ).— ಅಧ್ಯಕ್ಷರೇ, ಈ ದಿವಸ ನಮ್ಮ ಸಭೆಯ ಮುಂದಿರತಕ್ಕ ಈ ಐದು ಸಂತಾಪಸೂಚಕ ನಿರ್ಣಯಗಳನ್ನೆಲ್ಲಾ ಅನುಮೋದಿಸುತ್ತಾ ಮತ್ತು ಪ್ರತಿಪಕ್ಷದ ನಾಯಕರು ತಂದಿರುವ ತಿದ್ದುಪಡಿಯನ್ನೂ ಅನುಮೋದಿಸುತ್ತಾ ಒಂದೆರಡು ವಿಷಯಗಳನ್ನು ಹೇಳಬಯಸುತ್ತೇನೆ. ಶ್ರೀಗಳಾದ ಪತ್ತಿ ಬಸಪ್ಪನವರೂ, ಕೃಷ್ಣಸ್ವಾಮಿಪಿಳ್ಳೆಯವರೂ ನಮ್ಮ ಅಸೆಂಬ್ಲಿಯಲ್ಲಿ ಸದಸ್ಯರಾಗಿದ್ದು ದೇಶಕ್ಕೆ ಅನೇಕ ರೀತಿ ಸೇವೆಯನ್ನು ಮಾಡಿದ್ದಾರೆ. ಅದೇ ರೀತಿ ಶಂಕರಲಿಂಗೇಗೌಡರೂ ಕೂಡ ಮಾಡಿದ್ದಾರೆ. ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ಯರೂ ಕೂಡ ನಮ್ಮ ದೇಶದ ಪ್ರಗತಿಗಾಗಿ ಕಷ್ಟಪಟ್ಟು ದುಡಿದಿದ್ದಾರೆ. ಆಡಳಿತಗಾರರಾಗಿ ದೇಶಸೇವೆಯನ್ನು ಮಾಡಿದ್ದಾರೆ. ಇವರೆಲ್ಲರ ನಿಧನಕ್ಕಾಗಿ ನಾವು ದುಃಖಪಡಬೇಕಾಗಿದೆ.

ಹೆಚ್ಚು ಕ್ರಾಂತಿಯನ್ನು ಹುಟ್ಟಿಸಿದವರು, ಕ್ರಾಂತಿಕಾರಕವಾದ ಪಾರ್ಪಾಡುಗಳನ್ನು ಮಾಡಿರುವ ಮಾರ್ಷಲ್ ಸ್ಟಾಲಿರವರು ಈ ದಿವಸ ನಮ್ಮ ಮುಂದೆ ಇರದೇಯಿರುವುದು ಬಹಳ ಸಂಕಟಕರವಾದ ವಿಷಯ. ಈ ಬಹಳ ಕಷ್ಟದ ಸನ್ನಿವೇಶದಲ್ಲಿದ್ದೇವೆ. ಇಂಥಾ ಸಂದರ್ಭದಲ್ಲಿ ಅವರ ಸಹಾಯ ಬೇಕಾಗಿತ್ತು. ಇಂಡಿಯಾ ದೇಶದಂತೆ ಅವರೂ ಶಾಂತಿಪಥದಲ್ಲಿ ಹೋಗಬೇಕೆಂದು ಹೇಳುತ್ತಿದ್ದರು. ಶಾಂತಿಗಾಗಿ ಹೊಡೆದಾಡುತ್ತಿದ್ದವರು ಸ್ಟಾಲಿನ್ ಆಗಿದ್ದರು, ಇಂಥವರು ನಮ್ಮ ಮುಂದೆ ಇಲ್ಲದೇಯಿರುವುದು ಬಹಳ ಶೋಚನೀಯ. ಅವರ ಮರಣದಿಂದ ಪ್ರಪಂಚಕ್ಕೇ ನಷ್ಟವಾಗಿದೆ. As a mark of respect it desired that we should adjourn this House for to-day.

Sri M. PALANIYAPPAN (Ulsoor).— In associating myself fully with the sentiments expressed in these condolence references, I wish to say a few words about the five persons mentioned. Marshal Stalin began his life as an ordinary man and made himself the greatest figure. He was the right hand of Lenin and helped to form a separate party called the Communist Party and today one-third of the world comes under its control. It is a great loss to the people of that country and also to the world.

The demise of Sri N. Gopalaswamy Iyengar, Minister for Defence of the Central Government, is a great loss to this country. He was an able administrator and he has proved his worth in various capacities. His death is a great loss.

Mr. Sankaralinge Gowda, till recently one of the members of this House, has, every time he stood up to speak on the floor of the House, created much humour. By speaking humourously he would try to impress on the members—by his seemingly frivolous talks—all his points. At the same time, his presence in the Assembly used to make the Assembly a very lively one. In his loss we feel that this House has lost a man with some good humour and a man who knew something and a man with a lot of experience. Regarding the other two persons, I quite agree with the sentiments already expressed and pray for their souls.

***Sri K. S. VASAN** (Kolar Gold Fields).—Sir, I fully associate myself with the condolence references placed before us by the Leader of the House. The entire world is now mourning the death of Marshal Stalin. It is quite proper that we, as was done in the House of the People and in other State Legislatures, approve the reference then adjourn without any other further deliberations. To that effect I support Mr. Imam's motion and request the other Hon'ble Members to accept that. The dignity of the House requires that we adjourn without transacting any further business today.

ಶ್ರೀ ಎ. ಭೀಮಪ್ಪನಾಯಕ್ (ಹೊಳಕಾಲ್ಮುರು).— ಅಧ್ಯಕ್ಷರೇ, ಈಗತಾನೆ ಐದು ಜನ ಮಹಾವ್ಯಕ್ತಿಗಳು, ದಿವಂಗತರಾದ ಬಗ್ಗೆ ನಮ್ಮ ಅನೇಕ ಮಿತ್ರರು ಅವರ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ; ಮತ್ತು ಈಗ ಸಭೆಯ ಮುಂದೆ ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯವನ್ನು ನಾವೆಲ್ಲರೂ ಅನುಮೋದಿಸುತ್ತೇವೆ. ನಾವು ಈ ದಿವಸ ಐದು ಜನ ಮಹಾ ವ್ಯಕ್ತಿಗಳನ್ನು ಕಳೆದುಕೊಂಡಿದ್ದೇವೆ. ಮೂರನೆಯ ಮಹಾಯುದ್ಧ ನಡೆಯುಬಹುದೆಂದು ಜನರು ಅಲ್ಲಲ್ಲೇ ಆಡಿಕೊಳ್ಳುತ್ತಿದ್ದರು. ಅಂಥ ಸಮಯದಲ್ಲಿ ಇಂದು ಕಣ್ಮರೆಯಾಗಿರತಕ್ಕ ಮಹಾವ್ಯಕ್ತಿ ಮಾರ್ಷಲ್ ಸ್ಟಾಲಿನ್‌ರವರು 'ನಮಗೆ ಯುದ್ಧಬೇಕಾಗಿಲ್ಲ, ರಷ್ಯಾಕ್ಕೆ ಅಂಥ ಯುದ್ಧಾಂಕಾಕ್ಷೆಗಳಾವುವೂ ಇಲ್ಲ. ಆದಷ್ಟೂ ರಷ್ಯಾ ಶಾಂತಿಯಿಂದಿರಬೇಕು" ಎಂಬುದಾಗಿ ಹೇಳುತ್ತಿದ್ದರು. ಇಂಥ ಮಹಾವ್ಯಕ್ತಿಗಳು ಇನ್ನೂ ಕೊಂಚ ಕಾಲ ಇದ್ದಿದ್ದರೆ ಬಹಳ ಚೆನ್ನಾಗಿರುತ್ತಿತ್ತು. ಅಮೇರಿಕಾ ದೇಶಕ್ಕೆ ಈಗ ತಾನೆ ಅಧ್ಯಕ್ಷರು ಹೊಸದಾಗಿ ಬಂದಿದ್ದಾರೆ. ಇಂಥ ವೇಳೆಯಲ್ಲಿ ಸ್ಟಾಲಿನ್‌ರಂಥ ಅನುಭವಶಾಲಿಗ

ಳಾದ ಮಹಾ ವ್ಯಕ್ತಿಗಳು ಇದ್ದಿದ್ದರೆ ಪ್ರಪಂಚದ ಆಡಳಿತವನ್ನು ಒಂದು ಸುವ್ಯವಸ್ಥಿತವಾದ ಶಾಂತಿ ಮಾರ್ಗದಲ್ಲಿ ನಡೆಸಿಕೊಂಡು ಪ್ರಪಂಚವನ್ನು ಸುಖವಾಗಿ ಸಂರಕ್ಷಣೆ ಮಾಡಿಕೊಂಡು ಬರುತ್ತಿದ್ದರೆಂದು ಕಾಣುತ್ತದೆ. ಆದರೆ ಅಂಥ ಮಹಾನುಭಾವ ವ್ಯಕ್ತಿ ಈ ದಿವಸ ನಮ್ಮಗಳ ಮಧ್ಯೆ ಇರದೆ ಹೊರಟುಹೋಗಿರತಕ್ಕದ್ದು ನಮ್ಮಗಳ ದುರ್ದೈವ.

ಎಚ್. ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಸಹ ಈ ದಿವಸ ನಮ್ಮೆಲ್ಲರನ್ನೂ ಅಗಲಿ ಹೋದದ್ದೂ ಕೂಡ ಒಂದು ವ್ಯಸನಕರವಾದ ವಿಷಯ.

ನಮ್ಮ ಸಂಸ್ಥಾನದಲ್ಲಿ ಪ್ರಜಾಪ್ರತಿನಿಧಿ ಸಭೆ ಮತ್ತು ನ್ಯಾಯವಿಧಾಯಕ ಸಭೆ, ವಿಧಾನ ಸಭೆ ಇತ್ಯಾದಿ ರಾಜಕೀಯ ರಂಗಗಳಲ್ಲಿ ಇಂದು ಕಣ್ಮರೆಯಾಗಿರತಕ್ಕ ಶ್ರೀ ಕೃಷ್ಣಸ್ವಾಮಿ ಪಿಳ್ಳೈಯವರೂ, ಶ್ರೀಯುತ ಪತ್ತಿ ಬಸಪ್ಪನವರೂ ಮತ್ತು ಶ್ರೀ ಎಂ. ಶಂಕರಲಿಂಗೇಗೌಡರೂ ಬಹಳವಾಗಿ ದೇಶಕ್ಕೆ ಸೇವೆಗಳನ್ನು ಸಲ್ಲಿಸಿದ್ದಾರೆ. ಈ ಎಲ್ಲರ ಬಗ್ಗೆ ಈಗಾಗಲೇ ನಮ್ಮ ಅನೇಕ ಮಿತ್ರರು ಅವರ ಸಂತಾಪವನ್ನು ವ್ಯಕ್ತಪಡಿಸಿದ್ದಾರೆ. ಹಾಗೆ ಅವರು ವ್ಯಕ್ತಪಡಿಸಿರತಕ್ಕ ಅಭಿಪ್ರಾಯಕ್ಕೆ ಇಡೀ ಸಭೆಯು ತನ್ನ ಅನುಮತಿಕೊಟ್ಟಿದೆ. ಈ ಸಂದರ್ಭದಲ್ಲಿ ನಾವು ಏನೊಂದು ಅಭಿಪ್ರಾಯವನ್ನು ವ್ಯಕ್ತಪಡಿಸುತ್ತೇವೆಯೋ ಅದು ಬಹಳ ಮುಖ್ಯವಾದದ್ದು. ಆ ಅಭಿಪ್ರಾಯಕ್ಕೆ ನಾನೂ ಸಹ ಭಾಗಿಯಾಗಿದ್ದೇನೆ. ಹಾಗೆ ಇಂದು ಕಣ್ಮರೆಯಾಗಿರತಕ್ಕ ಐದು ಜನ ಮಹಾನುಭಾವರುಗಳ ಬಗ್ಗೆ ನಮ್ಮ ವ್ಯಸನವನ್ನು ಸೂಚಿಸೋಣ, ಅವರೆಲ್ಲರ ಆತ್ಮಕ್ಕೆ ಶಾಂತಿಯಿನ್ನೆಯಲೆಂದು ಭಗವಂತನನ್ನು ಪ್ರಾರ್ಥಿಸೋಣ. ಆದರೆ ಅಷ್ಟಕ್ಕೆ ಸುಮ್ಮನಿರದೆ ಶ್ರೀಮಾನ್ ಇಮಾಂರವರು ದೆಹಲಿಯಲ್ಲಿ ಯಾವ ರೀತಿಯಾಗಿ ಪಾರ್ಲಿಮೆಂಟನ್ನು ಮುಂದುವರಿಸಲಾಯಿತೋ ಹಾಗೆಯೇ ಇಲ್ಲಿಯೂ ಸಹ ಈ ಸಭೆಯನ್ನು ಈ ದಿವಸ ಮುಂದುವರಿಸಬೇಕೆಂದು ಹೇಳಿದ್ದಾರೆ. ಆದರೆ ಈ ಅಭಿಪ್ರಾಯವನ್ನು ಮಾತ್ರ ನಾನು ಒಪ್ಪಲಾರೆ. ಕೇಂದ್ರ ಒಂದು ವಿನಾ ಇತರ ಕಡೆಗಳಲ್ಲಿ ಹಾಗೆ ಅಡ್ಜರ್ನ್ ಮಾಡಿರತಕ್ಕ ಸಂದರ್ಭಗಳಿರುವುದಿಲ್ಲ.

ಶ್ರೀ ಎಸ್. ಶ್ರೀನಿವಾಸಯ್ಯಂಗಾರ್ (ಟಿ-ನರಸೀಪುರ).—ಹೈದರಾಬಾದಿನಲ್ಲಿ ಸಭೆಯನ್ನು ಅಡ್ಜರ್ನ್ ಮಾಡಿದ್ದಾರೆ.

ಶ್ರೀ ಎ. ಭೀಮಪ್ಪನಾಯಕ್.—ಹೌದು, ಆದರೆ ಬೊಂಬಾಯಿನಲ್ಲಿ ಈ ನಿರ್ಣಯವನ್ನು ತಳ್ಳಿಹಾಕಿದ್ದಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ (ಮಳವಳ್ಳಿ-ಅನುಸೂಚಿತ ಜಾತಿಗಳು).—ತಾವು ಹಾಗೆ ಹೇಳುವುದು ತಪ್ಪು.

ಶ್ರೀ ಎ. ಭೀಮಪ್ಪನಾಯಕ್.—ನಾನು ಹೇಳುವುದರಲ್ಲೇನೂ ತಪ್ಪಿಲ್ಲ. ತಾವು ಅದನ್ನು ತಪ್ಪಾಗಿ ತಿಳಿದುಕೊಂಡಿದ್ದೀರಿ. ಆದಕ್ಕೆ ನಾನೇನು ಮಾಡಲಿ! ನಾನು ಹೇಳತಕ್ಕದ್ದನ್ನು ತಾವು ಸಂಪೂರ್ಣವಾಗಿ ಕೇಳಿ. ಕೇವಲ ನಮ್ಮ ವ್ಯಸನವನ್ನು ಸೂಚಿಸುವುದಕ್ಕೋಸ್ಕರವೇ ನಾವೀದಿವಸ ನಮ್ಮ ಈ ಸಭೆಯನ್ನು ಅಡ್ಜರ್ನ್ ಮಾಡಿ ನಾವೆಲ್ಲರೂ ಮನೆಗಳಿಗೆ ಹೋಗಬೇಕೆಂದು ಹೇಳತಕ್ಕವರ ಪೈಕಿ ಸ್ವ್ಯಾಲೆನ್ನರು ಒಬ್ಬರಲ್ಲ. ಅವರೇ ಒಂದು ವೇಳೆ ಈ ದಿವಸ ಇದ್ದಿದ್ದರೆ ಮಾಡತಕ್ಕ ಕೆಲಸವನ್ನು ಬಿಟ್ಟು ಹೀಗೆ ಮನೆಗಳಿಗೆ ಹೋಗಬೇಕೆಂದು ಹೇಳತಕ್ಕಂಥ ಶೂರ ಧೀರನಾಗಿರುತ್ತಿರಲಿಲ್ಲವೆಂದು ನನಗೆ ಎನ್ನಿಸುತ್ತದೆ. ಆ ಮಹಾವ್ಯಕ್ತಿ ಯಾವಾಗಲೂ ಕೆಲಸ ಮೊದಲು ಪೂರೈಸಬೇಕು ಎಂದು ಹೇಳತಕ್ಕವರಲ್ಲಿ ಮೊದಲನೆಯವರು.

ಈ ದಿವಸ ಶ್ರೀಮನ್ಮಹಾರಾಜರವರು ಅಪ್ಪಣೆಕೊಡಿಸಿರತಕ್ಕ ಭಾಷಣದ ಮೇಲೆ ಮಾತನಾಡಲು ಅವಕಾಶ ಕೊಡಲಾಗಿರುತ್ತದೆ. ನಾವು ಈ ದಿವಸ ಸಭೆಯನ್ನು ಮುಂದುವರಿಸಿದ್ದೇ ಆದರೆ ನಮ್ಮ ಬಜೆಟ್ ಅಧಿವೇಶನವೂ ಸಕಾಲಕ್ಕೆ ಮುಗಿಯದೆ ಒಂದು ದಿವಸವನ್ನೂ ಮುಂದುವರಿಸಬೇಕಾಗುತ್ತದೆ. ತಿಂಗಳು ಪೂರೈಸಿದರೂ ಈ ಬಜೆಟ್ ಅಧಿವೇಶನ ಮುಗಿಯುವಂತೆ ಕಾಣುವುದಿಲ್ಲ. ನ್ಯಾಯವಾಗಿ ನಡೆಯಬೇಕಾದ ಕೆಲಸಕಾರ್ಯಗಳೆಲ್ಲವೂ ನಿಂತು ಹೋಗುತ್ತವೆ. ಆದ್ದರಿಂದ ಇದನ್ನೇ ಒಂದು ಭಾರಿ ವಿಚಾರವಾಗಿ ಭಾವಿಸದೆ ನಾವು ನಮ್ಮ ಕಾರ್ಯದಲ್ಲಿ ಪ್ರವೇಶಮಾಡುವುದು ಉಚಿತವಾದುದೆಂದು ತೋರುತ್ತದೆ. ಕೇಂದ್ರದವರಿಗೇನೋ ಬಜೆಟ್ ಸಭೆಯನ್ನು ಸಕಾಲದಲ್ಲೇ ಅಂದರೆ ಮಾರ್ಚಿ 26ನೆಯ ತಾರೀಖಿನೊಳಗಾಗಿಯೇ ಮುಗಿಸುವಂಥ ಒಂದು ಸದವಕಾಶ ಇದ್ದುದರಿಂದ ಅವರು ಸಭೆಯನ್ನು ಮುಂದುವರಿಸಲು ಅವಕಾಶವಿತ್ತು. ಆಗ್ಗೆ ಆ ಸಭೆಯಲ್ಲಿ ನಮ್ಮ ಪ್ರತಿನಿಧಿಗಳೂ ಇದ್ದು ಅದನ್ನು ಅಡ್ಜರ್ನ್ ಮಾಡಿಸಿದ್ದಾರೆ. ಆದರೆ ಇದನ್ನೇ ಒಂದು ಪ್ರಿಸಿಡೆಂಟ್ ಮಾಡಬೇಕೆಂದು ನಾನು ಹೇಳುತ್ತಿಲ್ಲ. ಹೇಗೂ ಸಲ್ಲಿಸಬೇಕಾದ ಗೌರವವನ್ನು ಈ ಬಗ್ಗೆ ನಾವೆಲ್ಲರೂ ಸಲಿಸಿದ್ದೇವೆ. ನಿಮ್ಮ ಅಭಿಪ್ರಾಯವನ್ನು ನಾವೆಲ್ಲರೂ ಒಪ್ಪಿಕೊಂಡಿದ್ದೇವೆ. ಆದಕಾರಣ ತಾವಿನ್ನು ಈ ಅಭಿಪ್ರಾಯವನ್ನು ಒತ್ತಾಯ ಮಾಡದೆ ಸಭೆಯ ಕಾರ್ಯಕಲಾಪಗಳನ್ನು ನಡೆಸಲು ಅನುಕೂಲಮಾಡಬೇಕೆಂದು ತಿಳಿಸುತ್ತೇನೆ. ಇಷ್ಟಕ್ಕೂ ಅವರು ತೃಪ್ತರಾಗದೆ ಸಭೆಯನ್ನು ಮುಂದುವರಿಸಬೇಕೆಂದು ಒತ್ತಾಯಪಡಿಸುವ ಪಕ್ಷಕ್ಕೆ ನಾನು ಅವರೇ ತಂದಿರುವ ತಿದ್ದುಪಡಿ ಸೂಚನೆಯನ್ನು ವಿರೋಧಿಸುತ್ತೇನೆ.

ಶ್ರೀ ಬಿ. ಹುಚ್ಚೇಗೌಡ (ತುರುವೇಕೆರೆ).—ಸ್ವಾಮಿ, ಸಭಾನಾಯಕರು ಈಗತಾನೆ ಸಭೆಯ ಮುಂದೆ ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯದ ಬಗ್ಗೆ ಸಭೆಯಲ್ಲಿರತಕ್ಕ ಪ್ರತಿಯೊಬ್ಬರೂ ತಮ್ಮ ಸಂಪೂರ್ಣ ಒಪ್ಪಿಗೆಯನ್ನಿತ್ತಿದ್ದಾರೆ.

ಮಾರ್ಷಲ್ ಸ್ವ್ಯಾಲೆನ್ನರವರು ತಮ್ಮ 74ನೆಯ ವಯಸ್ಸಿನಲ್ಲಿ ಮೃತಿಯನ್ನೈದಿದ್ದಾರೆ. ಅವರ ವಿಚಾರವಾಗಿ ಈಗಾಗಲೇ ಅನೇಕ ವಿಷಯಗಳನ್ನು ಸಭಾನಾಯಕರೂ ಮತ್ತು ಇತರ ನನ್ನಸ್ನೇಹಿತರುಗಳೂ ಹೇಳಿರುತ್ತಾರೆ. ಜನರೆಲ್ಲರ ಆಶೆ ಆಕಾಂಕ್ಷೆಗಳನ್ನು ಇವರು ಅವರ ಜೀವಿತ ಕಾಲದಲ್ಲೇ ಈಡೇರಿಸಿಕೊಟ್ಟಂಥ ಮಹಾನುಭಾವರು. ಜನರೆಲ್ಲಾ ತಮ್ಮ ಆಕಾಂಕ್ಷೆಗಳನ್ನು ತೊರೆದು ದಾರಿ ಕಾಣದೆ ನಿರಾಶರಾಗಿದ್ದಂಥವರಿಗೆ ಒಂದು ಸುಗಮವಾದ ದಾರಿಯನ್ನು ಹಾಕಿಕೊಟ್ಟು ಅವರು ಸುಖವಾಗಿ ಬಾಳುವಂಥ ಅವಕಾಶವನ್ನು ಕಲ್ಪಿಸಿಕೊಟ್ಟಂಥ ಜನಾನುರಾಗಿಯಾದ ಮಹಾಧೀರ ವ್ಯಕ್ತಿ ಇವರು. ಇವರು ಪ್ರಪಂಚಕ್ಕೆ ಒಂದು ಹೊಸ ಮಾದರಿಯ ನೂತನ ಜೀವನವನ್ನು ಕಂಡುಹಿಡಿದು, ತನ್ಮೂಲಕ ಕೋಟ್ಯಂತರ ದೀನದಲಿತರು ತಮ್ಮ ಜೀವನವನ್ನು ಸರಾಗವಾಗಿ ನಡೆಸಿಕೊಂಡು ಹೋಗುವಂತೆ ಒಂದು ಮಾರ್ಗ ಕಲ್ಪಿಸಿ ಕೊಟ್ಟಿದ್ದಾರೆ. ಪ್ರಪಂಚದಲ್ಲಿರುವ 200 ಕೋಟಿ ಜನಸಂಖ್ಯೆಯಲ್ಲಿ ಈ ದಿವಸ ಸುಮಾರು ಒಂದು ನೂರು ಕೋಟಿ ಜನರು ಆ ನೂತನ ಮಾರ್ಗದ ಸಂಪೂರ್ಣ ಫಲವನ್ನು ಪಡೆಯುತ್ತಿದ್ದಾರೆ. ಇಂಥ ಮಹಾನುಭಾವರ ಅಗಲುವಿಕೆಯ ಬಗ್ಗೆ ನಾವೆಲ್ಲರೂ ನಮ್ಮ ಹೃತ್ಪೂರ್ವಕವಾದ ದುಃಖವನ್ನು ಸೂಚಿಸತಕ್ಕದ್ದು ನ್ಯಾಯವಾಗಿಯೇ ಇದೆ.

(ಶ್ರೀ ಬಿ. ಹುಚ್ಚೇಗೌಡ).

ಆದರೆ ಶ್ರೀಮಾನ್ ಭೀಮಪ್ಪನಾಯಕರವರು ಈಗ ತಾನೆ ಮಾತನಾಡುತ್ತ 'ಕೇಂದ್ರದಲ್ಲಿ ಅವರು ಸಭೆಯನ್ನು ಮುಂದುವರಿಸಿಬಿಟ್ಟಿದ್ದಾರೆ, ಅಲ್ಲಿಗೇ ಅದು ಮುಕ್ತಾಯವಾಯಿತು, ಅವರು ಹಾಗೆ ಮುಂದುವರಿಸಿದಮೇಲೆ ಪುನಃ ನಾವೇನೂ ಇಲ್ಲಿ ಆ ರೀತಿ ಮಾಡಬೇಕಾದ್ದಿಲ್ಲ' ಎಂಬುದಾಗಿ ಹೇಳಿದರು. ಆದರೆ ಇನ್ನು ಕೆಲವು ದಿನಗಳ ತರುವಾಯ ಇಂತಹ ಆಧಾರಗಳ ಮೇಲೆ ಅನುತಾಪ ಸೂಚಿಸುವನಿರ್ಣಯಗಳನ್ನೂ ಸಹ ಈ ಸಭೆಯ ಮುಂದೆ ತರಲೇಬಾರದೆಂದು ಅವರು ಹೇಳಿದರೂ ಹೇಳಬಹುದು. ಹಾಗೆಯೇ ಅವರು ಮುಂದುವರಿದು ಈ ಸಭೆಯ ಕಾಲ ಬಹಳ ಅಮೂಲ್ಯವಾದದ್ದೆಂದೂ ಹೇಳಿದರು. ನಿಜ, ಇಂಥ ಅಮೂಲ್ಯವಾದ ಕೆಲಸವನ್ನೂ ಮೂಲೆಗಿಟ್ಟು ನಮ್ಮ ವ್ಯಸನವನ್ನು ಸೂಚಿಸಬೇಕಾದದ್ದು ಬಹಳ ಮುಖ್ಯವಾದದ್ದು. ಆದರೆ ಈ ಬಗ್ಗೆ ಅವರು ಬಹಳ ಉದಾಸೀನ ಭಾವದಿಂದ ಮಾತನಾಡಿದರು. ಅದು ಸರಿಯಾದದ್ದಲ್ಲ.

Sri A. BHEEMAPPA NAIK.—He is making unfounded allegations. I request him not to make such allegations.

'ಉದಾಸೀನ' ಎಂದು ತಾವು ಖಂಡಿತ ಹೇಳಬಾರದು. ಈಗತಾನೆ ಈ ಸಭೆ ಸೇರಿರುತ್ತದೆ. ವರ್ಷ ಪೂರ್ತಿಸುವುದರೊಳಗಾಗಿ ನಾವು ನಮ್ಮ ಬಡ್ಜೆಟ್ಟನ್ನು ಮಂಜೂರುಮಾಡಲು ಸಾಧ್ಯವಾಗಲಾರದು. ಹೀಗೆ ಸಭೆಯನ್ನು ಮುಂದುವರಿಸಿದರೆ ವರ್ಷ ಮುಗಿದುಹೋಗುತ್ತದೆ ಎಂದು ಮಾತ್ರ ಹೇಳಿದೆನೇ ಶಿವಾಯಿ ಹಾಗೇನೂ ನಾನು ಉದಾಸೀನವಾಗಿ ಮಾತನಾಡಿಲ್ಲ. ಅದನ್ನೇ ತಾವು 'ಉದಾಸೀನ' ಎಂದು ಹೇಳುತ್ತೀರಿ.

2-30 P.M.

ಶ್ರೀ ಬಿ. ಹುಚ್ಚೇಗೌಡ.—ಆದರೆ ಸ್ವಾರ್ಟ್ಜ್‌ಲರ ಮರಣಾನಂತರ ಇದೇ ಮೊದಲನೆಯ ಸಲ ನಾವು ಸೇರಿರುವುದು, ಅದಕ್ಕಾಗಿ ನಾವು ಹೇಳುತ್ತಿದ್ದೇವೆ ಅಷ್ಟೆ. ಇಷ್ಟಕ್ಕೇ ನೀವು ಅಷ್ಟಾಗಿ ಆಕ್ಸೆಪ್ಷನ್ ತಕ್ಕೊಳ್ಳಬೇಕಾಗಿಲ್ಲ. ಪ್ರತಿಪಕ್ಷದವರಿಂದ ಇಂಥ ಸೂಚನೆ ಬಂದಕ್ಷಣ ಅದನ್ನು ಬೇರೆ ಅರ್ಥದಲ್ಲಿ ತಿಳಿಯಕೂಡದು. ಅದಕ್ಕೆಯೇ ನಾನು ತಮಗೆ ಉದಾಸೀನತೆ ಎಂದು ಮೊದಲು ಹೇಳಿದ್ದು.

ಇನ್ನು, ಶ್ರೀಮಾನ್ ಶಂಕರಲಿಂಗೇಗೌಡರ ವಿಚಾರವನ್ನು ಎಲ್ಲರೂ ಹೇಳಿದ್ದಾರೆ. ನನಗಂತೂ ಅವರು ಬಹಳ ಆಪ್ತರಾಗಿದ್ದರು. ಅಧಿವೇಶನ ನಡೆಯುತ್ತಿದ್ದಾಗ ನದಾ ಜೊತೆಯಲ್ಲೇ ಇರುತ್ತಿದ್ದರು, ವಾಲ್ಯದಿಂದಲೂ ನನ್ನ ಸ್ನೇಹಿತರಾಗಿದ್ದರು. ಅವರ ಶಕ್ತಿ ಸಾಮರ್ಥ್ಯಗಳ ವಿಚಾರ ಮಾನ್ಯಸದಸ್ಯರೆಲ್ಲರಿಗೂ ಗೊತ್ತೇ ಇದೆ. ಅಂಕಿ ಅಂಶಗಳ ವಿಷಯದಲ್ಲಿ ಅವರು ಅನೇಕವಾದ ಪುಸ್ತಕಗಳನ್ನು ಓದಿದ್ದರು ಮತ್ತು ಪುಸ್ತಕಗಳನ್ನು ಬರೆದಿದ್ದಾರೆ. ಅನೇಕ ಸಂದರ್ಭಗಳಲ್ಲಿ, ಎಕನಾಮಿಕ್ ಡೆವಲಪ್‌ಮೆಂಟ್ ವಿಚಾರದಲ್ಲಿ ಅವರು ಕೆಲಸ ಮಾಡಿ ಬಂದಿದ್ದರು. ಅಂಥ ಮಹನೀಯರು ಜನಾಯತರಾಗಿ 8 ತಿಂಗಳೊಳಗಾಗಿಯೇ ನಿಧನ ಹೊಂದಿರುವುದು ಬಹಳ ಸಂತಾಪವನ್ನುಂಟುಮಾಡುವುದಾಗಿದೆ. ಅದರ ವಿಚಾರದಲ್ಲಿ ಅವರ ಕುಟುಂಬ ವರ್ಗದವರಿಗೆ ನಮ್ಮ ಸಂತಾಪವನ್ನು ವ್ಯಕ್ತಪಡಿಸುವುದು ಸೂಕ್ತವಾಗಿದೆ.

ದಿವಂಗತ ಎಚ್. ಜಿ. ಐಯ್ಯಂಗಾರ್‌ರವರೂ ಇಂಡಿಯಾ ದೇಶದರಾಜ್ಯಾಂಗ ರಚನೆಯಲ್ಲಿಯೂ ಮತ್ತು ಕಾಶ್ಮೀರ ಸಮಸ್ಯೆಯಲ್ಲೂ ಬಹಳ ಮುಖ್ಯ ಪಾತ್ರ ವಹಿಸಿದ್ದವರಾಗಿ ಪ್ರಸಿದ್ಧರಾಗಿದ್ದಾರೆ. ಈಚೆಗೆ ಇದೇ ಕಾಶ್ಮೀರ ಸಮಸ್ಯೆಯ ಸಂಬಂಧದಲ್ಲಿ ಅವರು ಯೂನೈಟೆಡ್ ನೇಷನ್ಸ್ ಸಭೆಗೂ ಹೋಗಿದ್ದರು ಅವರು ರಕ್ಷಣಾ ಮಂತ್ರಿಗಳಾಗಿ ಕೆಲವು ದಿವಸಗಳಲ್ಲೇ ನಿಧನ ಹೊಂದಿದ್ದಕ್ಕೆ ನಮ್ಮ ಸಂತಾಪ ಸೂಚಿಸಬೇಕಾಗಿದೆ.

ಹೀಗೆಯೇ ಕೃಷ್ಣಸ್ವಾಮಿಪಿಳ್ಳೆ ಮತ್ತು ಪತ್ತಿ ಬಸಪ್ಪನವರ ನಿಧನದ ಬಗ್ಗೆಯೂ ನಾವು ಸಂತಾಪವನ್ನು ಸೂಚಿಸುವುದು ಸೂಕ್ತ. ನಮ್ಮ ಈ ಪ್ರತಿನಿಧಿ ಸಭೆಯಲ್ಲಿ ಬಹಳಕಾಲ ಅವರುಗಳು ಸದಸ್ಯರಾಗಿದ್ದರು. ಬಹಳ ದಿವಸಗಳು ನಮ್ಮೊಡನೆ ಸಹೃದಯದಿಂದ ವರ್ತಿಸಿದವರು. ಅಂಥ ಸ್ನೇಹಿತರುಗಳು ಇಂದು ನಮ್ಮೊಡನೆ ಇಲ್ಲದಿರುವುದು ನಮಗೆ ಹೆಚ್ಚಿನ ಸಂತಾಪಕ್ಕೆ ಕಾರಣವಾಗಿದೆಯೆಂದು ಹೇಳಿ, ನಮ್ಮ ಈ ಮಾನ್ಯ ಸಭೆಯ ನಾಯಕರು ಈ ಸಂದರ್ಭದಲ್ಲಿ ನಾವು ಕೊಟ್ಟಿರುವ ಸೂಚನೆಯನ್ನು ಅನುಮೋದಿಸುತ್ತಾರೆಂದು ನಂಬಿದ್ದೇನೆ. ಆ ಸೂಚನೆಯನ್ನು ನಾವು ಹತ್ತು ಘಂಟೆಗೇ ಕಳುಹಿಸಿದ್ದರೂ ಯಾವ ಕಾರಣದಿಂದಲೋ ಅದು ಈ ವರೆಗೂ ಮಾನ್ಯ ಅಧ್ಯಕ್ಷರಗಮನಕ್ಕೆ ಬಾರದಿರುವುದನ್ನು ನೋಡಿ ಆಶ್ಚರ್ಯವಾಗಿದೆ. ದಯವಿಟ್ಟು ಈಗಲಾದರೂ ಅದನ್ನು ಗಮನಕ್ಕೆ ತೆಗೆದುಕೊಂಡು ಇವರುಗಳ ಸಂತಾಪಸೂಚನಾರ್ಥವಾಗಿ ಈ ಸಭೆಯನ್ನು adjourn ಮಾಡಬೇಕೆಂದು ಬಯಸುತ್ತೇನೆ.

ಶ್ರೀಮತಿ ಬಳ್ಳಾರಿ ಸಿದ್ಧಮ್ಮ (ದಾವಣಗೆರೆ).—ಮಾನ್ಯ ಅಧ್ಯಕ್ಷರೇ, ಈ ದಿವಸ ಇದುವರೆಗೂ ಮಾನ್ಯ ಸದಸ್ಯರುಗಳು ದಿವಂಗತರಾದ ಈ ಮಹನೀಯರುಗಳ ವಿಷಯವಾಗಿ ಬಹಳವಾಗಿ ಮಾತನಾಡಿದ್ದಾರೆ. ಆದರೂ ನನ್ನದೂ ಒಂದು ಕರ್ತವ್ಯ. ಹೆಣ್ಣುಮಕ್ಕಳ ಪರವಾಗಿ ಸಂತಾಪವನ್ನು ವ್ಯಕ್ತಪಡಿಸುವುದು ಉಳಿದಿದೆ. ಆದ್ದರಿಂದ ನಾನು ಮಹಿಳೆಯರ ಪರವಾಗಿ ನಾಲ್ಕು ಮಾತುಗಳನ್ನಾಡಿ ಈ ಸಂತಾಪ ಸೂಚನೆಯನ್ನು ಅನುಮೋದಿಸಬೇಕೆಂದು ನಿಂತಿದ್ದೇನೆ.

ಸ್ವಾರ್ಟ್ಜ್‌ಲರವರು ಪ್ರಪಂಚಕ್ಕೇ ಬೇಕಾದವರು. ನಮ್ಮೊಬ್ಬರಿಗೆಂದಾಗಲಿ, ಒಂದು ದೇಶಕ್ಕೆಂದಾಗಲಿ ಬೇಕಾದ ವ್ಯಕ್ತಿಗಳಲ್ಲ. ಅವರ ತತ್ವ ಇಡೀ ಪ್ರಪಂಚಕ್ಕೇ ಅನ್ವಯಿಸುತ್ತದೆ. ಆದ್ದರಿಂದ ಪ್ರಪಂಚದ ವ್ಯಕ್ತಿ ನಮಗೆ ಬೇಕು ಇನ್ನೊಬ್ಬರಿಗೆ ಇಲ್ಲವೆಂಬುದಿಲ್ಲ. ಅಂದಮೇಲೆ ಅವರ ಗುಣಗಳನ್ನು ಸುಮ್ಮನೆ ಹೊಗಳುವುದಕ್ಕಿಂತ ಅವರ ತತ್ವಗಳನ್ನು ಅನುಸರಿಕೊಂಡು, ಅವರು ಇದ್ದಾರೆಂದೇ ಭಾವಿಸಿ ಅವರ ಮಾರ್ಗವನ್ನು ಅನುಸರಿಸಿಕೊಂಡು ಹೋಗುವುದು ನಮಗೆ ಹೆಚ್ಚಿನ ಸುಖದಾಯಕವೆಂದು ನಾನು ಭಾವಿಸುತ್ತೇನೆ.

ಎರಡನೆಯ ವಿಷಯವೆಂದರೆ, ನಮ್ಮ ಸಭೆಯಲ್ಲಿ ಇಪ್ಪತ್ತು ವರ್ಷಗಳವರೆಗೂ ಇದ್ದು ಕೆಲಸಮಾಡುತ್ತಿದ್ದ ಶಂಕರಲಿಂಗೇಗೌಡರು ನಮ್ಮಲ್ಲಿ ಯಾರಿಗೂ ಹೊಸಬರಲ್ಲ. ನಮ್ಮ ಈ ಸಭೆಯ ಯಾರೊಬ್ಬ ಸದಸ್ಯರು ಬರುವುದಕ್ಕಿಂತಲೂ ಮುಂಚಿತವಾಗಿ ಶಾಸನಸಭಾ ಸದಸ್ಯರಾಗಿದ್ದು ಎಷ್ಟೋ ವರ್ಷಗಳು ಈ ಸಭೆಯಲ್ಲಿ ಇದ್ದರು. ಸತ್ತಮೇಲೆಯೂ ಕೂಡ ಈ ಸಭೆಯ ಮೇಲೆಯೇ ಇರುತ್ತೇನೆಂದು ಅವರು ಹಾಸ್ಯವಾಗಿ ಹೇಳುತ್ತಿದ್ದರು. ಯಾವಾಗಲೂ ಅವರು ಹಸನ್ಮುಖರಾಗಿ ಎಲ್ಲರನ್ನೂ ನಗಿಸುತ್ತಿದ್ದರು. ಆದರೂ ಅವರ ಮಾತುಕತೆಗಳು ಬಹಳ ಅರ್ಥಗರ್ಭಿತವಾಗಿರುತ್ತಿದ್ದವು, ಕೇಳುವುದಕ್ಕೂ ಇಂಪಾಗಿರುತ್ತಿತ್ತು. ಅಂಥವರನ್ನು ನಾವಿಂದು ಕಳೆದುಕೊಂಡಿದ್ದರಿಂದ ಈ ಸಭೆಗೇ ಒಂದು ಕಳೆ ಹೋಯಿತೆಂದು ಹೇಳಿದರೂ ತಪ್ಪಲ್ಲ. ಅವರು ಹೋದದ್ದು ನಮಗೆಲ್ಲರಿಗೂ ದುಃಖ.

ಇದಲ್ಲದೆ, ಎಚ್. ಜಿ. ಐಯ್ಯಂಗಾರ್‌ರವರೂ ಕೂಡ ಕಾಶ್ಮೀರ ಪ್ರಶ್ನೆಯ ವಿಷಯದಲ್ಲಿ ಮಾತ್ರ ಪಾತ್ರವಹಿಸಿದ್ದರೆಂದಲ್ಲ, ಅವರೂ ನಮ್ಮ ನಾಯಕರಲ್ಲೊಬ್ಬರಾಗಿದ್ದರು. ಈ ಪ್ರಕಾರ ಇಂದು ಐದು ಜನ ನಾಯಕರುಗಳನ್ನು ಕಳೆದುಕೊಂಡು ನಾವು ತಬ್ಬಲಿಯಾಗಿದ್ದೇವೆ. ಆದರೂ ಧೈರ್ಯಗೆಡದೆ ಅವರೆಲ್ಲರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲೆಂದು ಪ್ರಾರ್ಥನೋಣ. ಅದರೆ ಆ ಚಿಂತೆಯಲ್ಲೇ ನಾವು ಮಗ್ನರಾಗದೆ ಅವರು ಹಾಕಿಕೊಟ್ಟ ಮಾರ್ಗದಲ್ಲಿ ಮುಂದುವರಿದು ಅವರುಗಳು ಹೇಳಿದಂತೆ ಮತ್ತು ಶ್ರೀಮನ್ಮಹಾರಾಜರವರು ಹೇಳಿದಂತೆ ದೇಶದ ಪ್ರಗತಿಗಾಗಿ ದುಡಿಯೋಣ. ಹಾಗೆ ಮಾಡಿದರೆ ಅವರ ಆತ್ಮಕ್ಕೆ ಶಾಂತಿ ಲಭಿಸುತ್ತದೆಯೇ ಹೊರತು ಬರಿ ಮಾತಿನಲ್ಲಿ ಹೇಳುತ್ತಿದ್ದರೆ ಅವರು ತೃಪ್ತರಾಗುವುದಿಲ್ಲ. ಮೃತರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಈಯಲೆಂದು ಹಾರೈಸಿ ಅವರ ಕುಟುಂಬ ವರ್ಗದವರ ಸಂತಾಪದಲ್ಲಿ ನಾವೂ ಭಾಗಿಗಳಾಗಿದ್ದೇವೆಂದು ತಿಳಿಸಬೇಕೆಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಟಿ. ಎಚ್. ಮೂಡಲಗಿರಿಗೌಡ (ಕುಣಿಗಲು).— ಅಧ್ಯಕ್ಷರೇ, ಈ ಸಭೆಯಲ್ಲಿ ಮಂಡಿಸಿರತಕ್ಕಂಥ ಶೋಕ ಸೂಚನೆಯಾದ ಈ ನಿರ್ಣಯಕ್ಕೆ ನನ್ನ ಸಂಪೂರ್ಣ ಸಮ್ಮತಿಯಿದೆ. ಈಗಾಗಲೇ ಸ್ಟಾಲಿನ್‌ರವರ ವಿಚಾರದಲ್ಲೂ ಮತ್ತು ಎಚ್. ಜಿ. ಐಯ್ಯಂಗಾರ್‌ರವರ ವಿಚಾರದಲ್ಲೂ ಅನೇಕರು ಮಾತನಾಡಿದ್ದಾರೆ. ಅವರ ನಿಧನದಿಂದ ಇಡೀ ಪ್ರಪಂಚಕ್ಕೇ ಅದರಲ್ಲೂ ಹೆಚ್ಚಿಗೆ ಭಾರತಕ್ಕೆ ನಷ್ಟವಾಗಿದೆಯೆಂಬುದನ್ನು ಎಲ್ಲರೂ ತಿಳಿಸಿದ್ದಾರೆ. ನಮಗೆ ಮುಖ್ಯವಾಗಿ ಈ ಸಭೆಯ ಸದಸ್ಯರಾಗಿದ್ದ ಶ್ರೀಮಾನ್ ಶಂಕರಲಿಂಗೇಗೌಡರ ನಿಧನ ಎಲ್ಲಕ್ಕಿಂತ ಹೆಚ್ಚಿನ ಶೋಕವನ್ನು ತಂದಿದೆಯೆನ್ನಬಹುದು. ಅವರು ಹಿಂದಿನ ಪ್ರಜಾಪ್ರತಿನಿಧಿಸಭೆಯಲ್ಲೂ ಕೂಡ ಬಹಳ ವರ್ಷಗಳ ಕಾಲ ಸದಸ್ಯರಾಗಿದ್ದರು. ಅವರು ಹಿಂದಿನ ಅಸೆಂಬ್ಲಿಯಲ್ಲಿ ನಮಗೆ ತೋರಿಸಿದ ಸಹಾನುಭೂತಿಯನ್ನೂ ಮತ್ತು ಅವರು ಕೊಟ್ಟ ಸಹಕಾರವನ್ನೂ ನಾವು ಎಂದೆಂದಿಗೂ ಮರೆಯುವಹಾಗಿಲ್ಲ. ಹಿಂದಿನ ಇದೇ ಸಭೆಯಲ್ಲಿ ಈ ಸಭಾನಾಯಕರಾದ ಶ್ರೀಮಾನ್ ಕೆ. ಹನುಮಂತಯ್ಯನವರು ಪಾರ್ಟಿ ಲೀಡರಾಗಿದ್ದ ಕಾಲದಲ್ಲೂ ಅವರಿಗೆ ಪ್ರತಿಪಕ್ಷದ ಸದಸ್ಯರ ಬೆಂಬಲ ಯಾವುದಿತ್ತೆಂದರೆ, ಶ್ರೀಮಾನ್ ಶಂಕರಲಿಂಗೇಗೌಡರ ಬೆಂಬಲ. ಆಗ ಒಂದೊಂದು ಓಟೂ ಕೂಡ ಬಹಳ ಪ್ರಾಮುಖ್ಯವಾಗಿರುತ್ತಿತ್ತು. ಸ್ಪಿಲೇಷ್ ವೋಷ್ಟಗಳು ಬಂದ ಕಾಲದಲ್ಲೇ ಆಗಲಿ, ಬಿಲ್ಲುಗಳ ಕಾಲದಲ್ಲೇ ಆಗಲಿ ಅವರು ಮೊದಲಿನಿಂದ ಕೊನೆಯವರೆಗೂ ವಿರೋಧವಾಗಿಯೇ ಮಾತನಾಡುತ್ತಿದ್ದರೂ ಕೊನೆಯಲ್ಲಿ ಕಾಂಗ್ರೆಸ್ಸಿನವರಿಗೆ ಸಂಪೂರ್ಣ ಬೆಂಬಲವನ್ನು ಇಂತಹ ಕಾರಣಕ್ಕಾಗಿ ಕೊಡುತ್ತೇನೆಂದು ಹೇಳಿ ಅವರು ತೋರಿಸುತ್ತಿದ್ದ ಸಹಾನುಭೂತಿ ನಮಗೆ ಅಷ್ಟು ಮೆಚ್ಚಿನದಾಗಿತ್ತು. ಇಂದು ಶ್ರೀ ಕೆ. ಹನುಮಂತಯ್ಯನವರು ಈ ಸಭೆಯಲ್ಲಿದ್ದಿದ್ದರೆ ಪಕ್ಷದಲ್ಲಿ ಎಂಥ ಒಳ್ಳೆಯ ನುಡಿಗಳನ್ನು ಹೇಳುತ್ತಿದ್ದರೆಂಬುದನ್ನು ಹೇಳುವ ಹಾಗಿಲ್ಲ. ಅಷ್ಟು ಮೆಚ್ಚಿ ನುಡಿಯುತ್ತಿದ್ದರೆಂದು ನನಗೆ ಗೊತ್ತು. ಒಂದೊಂದು ಕ್ಷಣದಲ್ಲೂ ಕೂಡ ಅವರು ಈ ಸಭೆಯಲ್ಲಿ ಹಾಸ್ಯ ಹಾಸ್ಯವಾಗಿ ಮಾತನಾಡುತ್ತಾ ಏನೊಂದು ಕ್ಲಿಷ್ಟ ಪರಿಸ್ಥಿತಿ ಬಂದರೂ ಅದನ್ನು ಬಗೆಹರಿಸುವುದರಲ್ಲಿ ತಮ್ಮ ಚಾಣಕ್ಯತನವನ್ನೂ, ಜಾಣ್ಮೆಯನ್ನೂ ತೋರಿ ಬಹಳ ಮೃದುವಾಗಿ ಇತ್ಯರ್ಥಮಾಡುತ್ತಿದ್ದರು.

ಹೀಗೆ ಅವರು ಸುಮಾರು ಒಂದು ವರ್ಷಕಾಲ ಈ ಸಭೆಯಲ್ಲಿದ್ದ ಅವಧಿಯಲ್ಲಿ ಎಂಥೆಂಥ ಸಂದರ್ಭಗಳಲ್ಲಿ ಹೇಗೆ ವರ್ತಿಸಿದ್ದಾರೆ ಎಂಬುದು ಎಲ್ಲ ಸದಸ್ಯರಿಗೂ ಮನವರಿಕೆಯಾಗಿದೆ. ಅವರು ಈ ಸಭೆಯಲ್ಲಿಲ್ಲದಂತೆ ಕಣ್ಮರೆಯಾಗಿರುವುದು ಬಹಳ ವ್ಯಸನಕರವಾಗಿದೆ. ಇನ್ನು ಶಂಕರಲಿಂಗೇಗೌಡರಂತಹ ಮನುಷ್ಯ ಹುಟ್ಟುತ್ತಾನೆಯೆ ಎಂಬ ಯೋಚನೆ ನಮ್ಮ ಮನಸ್ಸಿಗೆ ಬರುತ್ತದೆ. ರಾಜಕೀಯದಲ್ಲಿ ಅವರು ಅವರದೇ ಪ್ರತ್ಯೇಕವಾದ ಒಂದು ರೀತಿಯಲ್ಲಿ ವ್ಯವಹರಿಸುತ್ತಿದ್ದರು. ಅವರ ವಿಷಯದಲ್ಲಿ ಎಲ್ಲರೂ ಸಹಾನುಭೂತಿ ತೋರಿಸಬೇಕು. ಭಗವಂತನು ಅವರ ಆತ್ಮಕ್ಕೆ ಶಾಂತಿ ಕೊಡಲೆಂದು ಹಾರೈಸುತ್ತೇನೆ. ಇದನ್ನು ಅವರ ಕುಟುಂಬಕ್ಕೆ ತಿಳಿಸಬೇಕೆಂದು ಕೋರುತ್ತೇನೆ.

ಶ್ರೀ ಕೃಷ್ಣಸ್ವಾಮಿ ಪಿಳ್ಳೈಯವರ ವಿಷಯದಲ್ಲಿ ಎರಡು ಮಾತು. ಅವರು ನನಗೆ ಗೊತ್ತು. ನಾನು ಹಿಂದಿನ ಅಸೆಂಬ್ಲಿಯಲ್ಲಿ ಸದಸ್ಯನಾಗಿದ್ದಾಗ ಅವರೂ ಇದ್ದರು. ಅವರು ಎದ್ದರೆ ಒಂದು ಸಿಂಹ ಎದ್ದಿದೆ ಅನ್ನುವಹಾಗಿತ್ತು. ಘರ್ಜನೆಯ ರೂಪದಲ್ಲಿ ಮಾತನಾಡುತ್ತಿದ್ದರು. ಏನೇ ಸಭೆಯಲ್ಲಿ ನಡೆದರೂ ಕೂಡ, ಯಾವ ವಿಷಯದಲ್ಲಾದರೂ ಕೂಡ ಸರ್ಕಾರದ ಪರವಾಗಿ ಮಾತನಾಡುತ್ತಿದ್ದಾರೆಂದು ಭಾಸವಾಗುವ ರೀತಿಯಲ್ಲಿ ಮಾತನಾಡುತ್ತಿದ್ದರು. ಧೈರ್ಯವಾಗಿ ಕೆಲಸಮಾಡಿದರು. ಹಿಂದಿನ ಅಸೆಂಬ್ಲಿಯಲ್ಲಿದ್ದು ಧೈರ್ಯಶಾಲಿಯಾಗಿ ಕೆಲಸಮಾಡಿ ಕೀರ್ತಿಯನ್ನು ಗಳಿಸಿದ್ದಾರೆ. ಅವರು ಕಣ್ಮರೆಯಾಗಿರುವುದು ನಮ್ಮಲ್ಲಿ ದುಃಖವನ್ನುಂಟುಮಾಡಿದೆ. ಅವರ ಆತ್ಮಕ್ಕೆ ಭಗವಂತನು ಶಾಂತಿಯನ್ನು ಕೊಡಲಿ. ಇತರರ ವಿಷಯದಲ್ಲಿ ಇದುವರೆಗೆ ಮಾನ್ಯ ಸದಸ್ಯರು ಏನು ಹೇಳಿದ್ದಾರೋ ಅದರಲ್ಲಿ ನಾನೂ ಭಾಗಿಯಾಗಿದ್ದೇನೆ. ಈ ಐದು ಮಂದಿಗಳು ನಮ್ಮಿಂದ ಕಣ್ಮರೆಯಾಗಿರುವುದು ಬಹಳ ದುಃಖಕರವಾದ ವಿಷಯ. ಇವರ ಆತ್ಮಗಳಿಗೆ ಭಗವಂತ ಶಾಂತಿ ಕೊಡಲೆಂದು ಪ್ರಾರ್ಥಿಸುತ್ತೇನೆ.

*ಶ್ರೀ ಎಚ್. ಕೆ. ಶಿವರುದ್ರಪ್ಪ (ಗುಂಡ್ಲುಪೇಟೆ).— ಸ್ವಾಮಿ, ಐದುಮಂದಿ ಕಣ್ಮರೆಯಾಗಿರುವ ವಿಷಯದಲ್ಲಿ ಸಂತಾಪಸೂಚನೆಯ ನಿರ್ಣಯವನ್ನು ಸಭಾನಾಯಕರು ಸೂಚಿಸಿದ್ದಾರೆ. ಇವರ ಮರಣದಿಂದುಂಟಾಗಿರುವ ದುಃಖವನ್ನು ಸಹಿಸಲು ದೇವರು ಶಕ್ತಿಯನ್ನು ಕರುಣಿಸಲೆಂದು ದೇವರನ್ನು ಪ್ರಾರ್ಥಿಸುತ್ತೇನೆ. ಶ್ರೀಮಾನ್ ಮೂಡಲಗಿರಿಗೌಡರು ಹೇಳಿದ ಹಾಗೆ, ಶಂಕರಲಿಂಗೇಗೌಡರು ನಮ್ಮ ಅಸೆಂಬ್ಲಿಯಲ್ಲಿ ಸದಸ್ಯರಾಗಿದ್ದು ಬಹು ಮುಖವಾಗಿ ದೇಶಸೇವೆ ಮಾಡಿದರು. ಅವರು ಇವೊತ್ತು ನಮ್ಮ ಜೊತೆಯಲ್ಲಿಲ್ಲ. ಅವರು ಬಹಳ ದಿವಸಗಳಿಂದ ಖಾಯಿಲೆಯಲ್ಲಿದ್ದರು. ಅವರು ಆಸ್ಪತ್ರೆಯಲ್ಲಿದ್ದರೂ ಕೂಡ ನಮ್ಮ ಅಸೆಂಬ್ಲಿಗೆ ಬಂದು ದೇಶಸೇವೆ ಮಾಡುತ್ತಿದ್ದರು ಎಂದ ಮೇಲೆ, ಅವರೆಷ್ಟು ಮಟ್ಟಿನ ದೇಶಸೇವಕರೆಂಬುದನ್ನು ಮತ್ತೆ ಹೇಳಬೇಕಾಗಿಯೇ ಇಲ್ಲ. ಶಂಕರಲಿಂಗೇಗೌಡರ ವಾಣಿ ಗಮನಾರ್ಹವಾಗಿತ್ತು. ಅವರು ಯಾವ ಪಕ್ಷದ ಅಭಿಪ್ರಾಯವನ್ನು ಪ್ರತಿಪಾದಿಸಲಿ, ಯಾವ ಅಭಿಪ್ರಾಯವನ್ನು ಹೊರಗೆಡಪಲಿ ಅದು ಪ್ರತಿಯೊಂದೂ ಬಹಳ ಸ್ವಾರಸ್ಯವಾಗಿ, ಹಾಸ್ಯದಿಂದ ಕೂಡಿದುದಾಗಿತ್ತಲ್ಲದೆ ದೊಡ್ಡ ಅಭಿಪ್ರಾಯಗಳಿಂದ ಕೂಡಿದ್ದಾಗಿತ್ತು. ನನಗೆ ಒಂದು ನಂಗತಿ ಜ್ಞಾಪಕಕ್ಕೆ ಬರುತ್ತದೆ. ಹಿಂದೆ ಶ್ರೀ ಎಸ್. ಸಿ. ಮಲ್ಲಯ್ಯನವರ ನಿಧನದ ಸಂಬಂಧವಾಗಿ ಸಂತಾಪಸೂಚಕ ನಿರ್ಣಯವನ್ನು ಸಭೆಯಲ್ಲಿ ಮಂಡಿಸಿದಾಗ ಶ್ರೀ ಶಂಕರಲಿಂಗೇಗೌಡರು, ಮನುಷ್ಯನ

(ಶ್ರೀ ಎಚ್. ಕೆ. ಶಿವರುದ್ರಪ್ಪ).

ಗುಣ ಗೊತ್ತಾಗಬೇಕಾದರೆ ಅವನು ಸತ್ತಮೇಲೆ ಎಂದು ಹೇಳಿದರು ಇದು ನಿಜವಾದ ಮಾತು, ಅವರು ಸಭೆಯಲ್ಲಿ ಈ ದಿವಸ ಇದ್ದಿದ್ದರೆ, ಎಷ್ಟು ನಲ ನಾವೆಲ್ಲ ನಗುತ್ತಿದ್ದೆವೋ ಎಂಬುದನ್ನು ಜ್ಞಾಪಿಸಿಕೊಳ್ಳುತ್ತಿದ್ದೇನೆ.

ಶಂಕರಲಿಂಗೇಗೌಡರ ಹಾಗೆಯೇ ಸಭೆಯ ಸದಸ್ಯರಾಗಿದ್ದ ಶ್ರೀ ಕೃಷ್ಣಸ್ವಾಮಿಪಿಳ್ಳೈಯವರು ಮತ್ತು ಪತ್ತಿ ಬಸಪ್ಪನವರೂ ಕೂಡ ದೇಶಸೇವೆಮಾಡಿದ್ದಾರೆ. ಅವರು ಪ್ರಜಾಪ್ರತಿನಿಧಿ ಸಭೆಯಲ್ಲಿ ಸದಸ್ಯರಾಗಿದ್ದಾಗ ನಾನೂ ಅವರ ಜತೆಯಲ್ಲಿರುವ ಭಾಗ್ಯ ನನಗೆ ಲಭಿಸಿತ್ತು. ಅವರ ದೇಶಸೇವೆ ಇವೊತ್ತು ನಮಗಿಲ್ಲದಂತಾಗಿ ಈ ಸಂತಾಪ ಸೂಚಕ ನಿರ್ಣಯವನ್ನು ತರುವಂತಾದುದಕ್ಕಾಗಿ ದುಃಖಪಡುತ್ತೇನೆ. ಅವರ ಆತ್ಮಕ್ಕೆ ಶಾಂತಿಯನ್ನು ಕೋರುವುದರಲ್ಲಿ ನಾನೂ ಭಾಗಿಯಾಗಿ ಅವರ ಮರಣದಿಂದುಂಟಾಗಿರುವ ದುಃಖವನ್ನು ಸಹಿಸಲು ಅವರ ಕುಟುಂಬದವರಿಗೆ ಶಕ್ತಿಕೊಡಲೆಂದು ಪರಮೇಶ್ವರನನ್ನು ಪ್ರಾರ್ಥಿಸುತ್ತೇನೆ.

ಶ್ರೀ ಬಿ. ಪಿ. ನಾಗರಾಜಮೂರ್ತಿ (ಮಳವಳ್ಳಿ).— ಮಾನ್ಯ ಅಧ್ಯಕ್ಷರೆ, ದಿವಂಗತರಾದ ಐದು ವ್ಯಕ್ತಿಗಳ ವಿಷಯದಲ್ಲಿ ತಂದಿರತಕ್ಕ ಸಂತಾಪ ಸೂಚಕ ನಿರ್ಣಯವನ್ನನುಮೋದಿಸಿ ಒಂದೆರಡು ವಿಷಯಗಳನ್ನು ಹೇಳಲಿಚ್ಛಿಸುತ್ತೇನೆ.

ಸ್ಟಾಲಿನ್‌ರ ವಿಷಯವಾಗಿ ಈಗಾಗಲೇ ಮಾನ್ಯ ಸದಸ್ಯರನೇಕರು ಮಾತನಾಡಿದ್ದಾರೆ. ಮಾರ್ಷಲ್ ಸ್ಟಾಲಿನ್ ಎಂದರೆ ಇಡೀ ಪ್ರಪಂಚದಲ್ಲೇ ಮನೆ ಮಾತಾಗಿತ್ತು. ಅಂತರರಾಷ್ಟ್ರೀಯ ಮಹಾವ್ಯಕ್ತಿಗಳಲ್ಲಿ ಸ್ಟಾಲಿನ್‌ರೂ ಒಬ್ಬರಾಗಿದ್ದರು. ಗುಣಕ್ಕೆ ಮತ್ಸರವಿಲ್ಲ ಎಂದು ಹೇಳುವಂತೆ, ಅವರೊಬ್ಬರು ಮಹಾವ್ಯಕ್ತಿಯೆಂದು ಅವರಲ್ಲಿ ಮರ್ಯಾದೆಯಿಟ್ಟು ಇಡೀ ವಿಶ್ವದಲ್ಲಿ ಎಲ್ಲೆಲ್ಲಿಯೂ ಅವರ ನಿಧನಕ್ಕಾಗಿ ಸಂತಾಪ ಸೂಚಿಸಿದ್ದಾರೆ. ಇಂಥ ಸಂದರ್ಭದಲ್ಲಿ ದುಃಖ ಸೂಚಿಸುವುದು ನ್ಯಾಯಬಾಗಿಯೇ ಇದೆ.

ಇನ್ನು ನಾಲ್ಕು ಜನ ಮಹನೀಯರಲ್ಲಿ ಶ್ರೀಗಳಾದ ಕೃಷ್ಣಸ್ವಾಮಿಪಿಳ್ಳೈಯವರನ್ನೂ ಪತ್ತಿ ಬಸಪ್ಪನವರನ್ನೂ ನಾನು ಖುದ್ದಾಗಿ ನೋಡದೆಯೇಯಿದ್ದರೂ ಅವರ ವಿಷಯ ಕೇಳಿದ್ದೇನೆ. ಅವರು ಈ ಸಭೆಯ ಸದಸ್ಯರಾಗಿದ್ದು ಎಂಥ ಕಾಲದಲ್ಲಿ ಜನರಿಗೂ ದೇಶಕ್ಕೂ ಸೇವೆಯನ್ನು ಸಲ್ಲಿಸಿದರೆಂಬುದನ್ನು ಕೇಳಿದ್ದೇನೆ. ನಾವೆಲ್ಲರೂ ಅವರ ಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿದೆ.

ಶಂಕರಲಿಂಗೇಗೌಡರ ವಿಷಯದಲ್ಲಿ ಕೆಲವು ಮಾನ್ಯ ಸದಸ್ಯರು ಪ್ರಸ್ತಾಪಮಾಡಿದ್ದಾರೆ. ಕಳೆದ ಚುನಾವಣೆಯಲ್ಲಿ ಅವರು ಉಮೇದುವಾರರಾಗಿ ನಿಂತಾಗ ನಾನೂ ಅವರಿಗೆ ಸಹಕಾರ ಕೊಟ್ಟಿದ್ದೇನೆ. ಅವರ ಚುನಾವಣಾ ಪ್ರಚಾರದಲ್ಲಿ ಭಾಗವಹಿಸುವ ಅವಕಾಶ ನನಗೆ ದೊರೆತಿತ್ತು. ಆಗ ಅವರು ಎಷ್ಟುಮಟ್ಟಿಗೆ ಜನಾನುರಾಗಿಗಳಾಗಿದ್ದರೆಂಬುದು ವ್ಯಕ್ತವಾಯಿತು. ಅವರಿಗೆ ಅಗಾಧವಾದ ಜನ ಬೆಂಬಲವಿತ್ತು. ಅವರ ಚುನಾವಣಾ ಪ್ರಚಾರ ಆದರ್ಶವಾಗಿ ಅದೇ ಒಂದು ವೈಶಿಷ್ಟ್ಯವನ್ನು ಪಡೆದಿತ್ತು. ಈಗತಾನೇ ಶ್ರೀಮತಿ ಬಳ್ಳಾರಿ ಸಿದ್ದಮ್ಮನವರು ಹೇಳಿದಹಾಗೆ, 'ನಾನು ಸತ್ತರೂ ಕೂಡ ಅಟ್ಟದಮೇಲಿರುತ್ತೇನೆ' ಎನ್ನುವಂತೆ, 'ನಾನು ಮೃತಪಟ್ಟರೂ ಕೂಡ ನನ್ನ ಪ್ರೇತವಾದರೂ ಅಸೆಂಬ್ಲಿಯ ಅಟ್ಟದ ಮೇಲೆ ಕುಳಿತು ಈ ಅಸೆಂಬ್ಲಿಯಲ್ಲಿ ಕಾಂಗ್ರೆಸ್ ಪಕ್ಷದವರು ಯಾರು ಒಂದು ತಪ್ಪು ಮಾಡಿದರೂ ಅವರ ಕುತ್ತಿಗೆಯನ್ನು ಹಿಡಿಯುತ್ತೇನೆ' ಎಂದೂ, ಮತ್ತು ಮಂತ್ರಿ ಮಂಡಲದ ಮೇಲೆ ಯಾರಾದರೂ ಆರೋಪಣೆ ಮಾಡಿದರೆ ಲಂಚದ ಆರೋಪಣೆ ಇಲ್ಲದಿರುವಾಗ ಅವರನ್ನು ದೂಷಣೆ ಮಾಡಬಾರದು ಎಂದೂ ದೇಶಾಭಿಮಾನದಿಂದ ಮಾತನಾಡುತ್ತಿದ್ದರು. ಲಂಚದ ಆರೋಪಣೆ ಬಂದರೆ ನಾನು ಮುಂದಾಳತ್ವ ವಹಿಸುತ್ತೇನೆ ಎಂದು ಹೇಳುತ್ತಿರುವರೋ ಎಂದು ಭಾಸವಾಗುತ್ತದೆ. ಶ್ರೀಮಾನ್ ಮೂಡಲಗಿರಿಗೌಡರು ಹೇಳಿದ ಹಾಗೆ, ಅವರು ಅನೇಕಸಾರಿ ಕಾಂಗ್ರೆಸ್ ವಿಷಯದಲ್ಲಿ ಸಹಾಯ ಮಾಡಿರಬಹುದು. ಚುನಾವಣೆಯಲ್ಲಿ ಅವರಿಗೆ ಪ್ರತಿನ್ಪರ್ಧಿಗಳಾಗಿ ಯಾರು ನಿಂತರೂ, ಅವರು ಎಂಥ ಪ್ರತಿಭಾಶಾಲಿಗಳಾಗಿದ್ದರೂ ಶಂಕರಲಿಂಗೇಗೌಡರ ಮುಂದೆ ಸೋಲನ್ನೊಪ್ಪಬೇಕಾಗುತ್ತಿತ್ತು. ಈಗ ನಡೆದ ಉಪಚುನಾವಣೆಯಲ್ಲಿಯೂ ಸಹ ಯಾರಾದರೂ ಓಟುಕೊಡಲು ಹೋದಾಗ ಶಂಕರಲಿಂಗೇಗೌಡರಿಗೆ ಜೈ ಎಂದು ಹೇಳುತ್ತಿದ್ದರು. ಅವರು ಸತ್ತರೂ ಕೂಡ ಜನರ ಮನಸ್ಸಿನಲ್ಲಿ ಒಂದು ಅಭಿಮಾನವನ್ನುಂಟು ಮಾಡಿದ್ದಾರೆ. ಇಂಥ ಮಹಾವ್ಯಕ್ತಿ ನಮ್ಮ ಕಣ್ಮರೆಯಾಗಿದ್ದಾರೆ. ಮಾನ್ಯ ಸದಸ್ಯರು ಹೇಳಿದಹಾಗೆ, ಅವರ ಹಾಸ್ಯದ ಮಾತುಗಳು ಕೇವಲ ಗ್ರಾಮ್ಯವಾಗಿದ್ದರೂ ಕೂಡ ಅರ್ಥಗರ್ಭಿತವಾಗಿರುತ್ತಿದ್ದವು. ಅವುಗಳ ಹಿಂದೆ ಕಟುವಾದ ಟೀಕೆ ಮತ್ತು ಉಪಯುಕ್ತವಾದ ಸೂಚನೆಗಳಿರುತ್ತಿದ್ದವು. ಅವರ ಮಾತು 'ಅಧರಕ್ಕೆ ಕಹಿಯಾಗಿದ್ದರೂ ಉದರಕ್ಕೆ ಸಿಹಿಯಾಗಿದ್ದವು'. ಈ ಎಲ್ಲ ಐದು ಮಂದಿಯ ಆತ್ಮಕ್ಕೂ ಶಾಂತಿ ಕೋರಿ, ಇನ್ನೊಂದು ಮಾತು ಹೇಳುವುದಾದರೆ, ನಮ್ಮ ಪಕ್ಷದ ನಾಯಕರಾದ ಶ್ರೀ ಇಮಾಂರವರ ಸೂಚನೆಗೆ ಬೆಂಬಲ ಕೊಡುವುದಲ್ಲದೆ, ದಿವಂಗತರ ಆತ್ಮಕ್ಕೆ ಗೌರವ ತೋರಿಸಲು ಈ ಸಭೆಯನ್ನು ಮುಂದುವರಿಸಬೇಕೆಂದು ಸೂಚಿಸುತ್ತೇನೆ. ಶ್ರೀಮಾನ್ ಭೀಮಪ್ಪನಾಯಕರು ಹೆಲ್ಲಿಯಲ್ಲಿ ಈ ರೀತಿ ಮಾಡಿದ್ದಾರೆ, ನಾವು ಪುನಃ ಇಲ್ಲಿ ಮಾಡಬೇಕಾಗಿಲ್ಲ, ಸಭೆಯನ್ನು ನಡೆಸಬಹುದೆಂದು ಹೇಳಿದರು. ಅವರ ಈ ವಾದವನ್ನು ಒಪ್ಪುವುದಕ್ಕಾಗುವುದಿಲ್ಲ.

ಇನ್ನು ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರ ನಿಧನದ ಬಗ್ಗೆಯೂ ಸಂತಾಪ ಸೂಚಕ ನಿರ್ಣಯವನ್ನು ಮಂಡಿಸಿದ್ದಾರೆ. ಆ ಬಗ್ಗೆ ಸಹ ಎಲ್ಲರೂ ತಮ್ಮ ಸಂತಾಪವನ್ನು ಸೂಚಿಸಿದ್ದಾರೆ. ಆದರೆ ಕೇಂದ್ರದವರು ಮಾಡತಕ್ಕ ಕಾರ್ಯಕರಾಪಗಳನ್ನು ಅನುಸರಿಸುವ ಸಂಪ್ರದಾಯವನ್ನು ನಾವು ಎಂದಿಗೂ ಬಿಟ್ಟಿಲ್ಲ. ಆದಪ್ರಯುಕ್ತ ಇಂಥ ಈ ಮಹನೀಯರುಗಳೆಲ್ಲರೂ ಈ ದಿವಸ ನಮ್ಮನ್ನು ಅಗಲಿ ಹೋಗಿರತಕ್ಕ ಬಗ್ಗೆ ಅವರಿಗೆ ನಾವು ನಮ್ಮ ಗೌರವವನ್ನು ತೋರಿಸಲು ನಮ್ಮ ಈ ದಿವಸದ ಕೆಲಸ ಕಾರ್ಯಗಳನ್ನು ಮುಂದುವರಿಸುವುದು ಬಹಳ ಅಗತ್ಯ. ಈಗಾಗಲೇ ಮೂರು ಗಂಟೆಯಾಗಿ ಹೋಗಿದೆ. ಇಲ್ಲಿಯತನಕ ನಾವು ಮಾಡಬೇಕಾಗಿದ್ದು ದನ್ನೆಲ್ಲಾ ಮುಕ್ಕಾಲು ಮೂರುಪೀಸೆ ಪಾಲು ಮಾಡಿ ಬಿಟ್ಟಿದ್ದೇವೆ. ಇನ್ನೆಲ್ಲ ಇರತಕ್ಕದ್ದು ಕೇವಲ ಒಂದು ಗಂಟೆ ಕಾಲ ಮಾತ್ರ. ಇಷ್ಟಕ್ಕಾದರೂ ಒಂದು ದೊಡ್ಡಮನಸ್ಸುಮಾಡಿ ಸಭೆಯವರೆಲ್ಲರೂ ಇಂದಿನ ಕಾರ್ಯಕರಾಪಗಳನ್ನು ಮುಂದಕ್ಕೆ ಹಾಕಲು ಅನುಮತಿಕೊಡಬೇಕೆಂದು ಪ್ರಾರ್ಥಿಸುತ್ತೇನೆ. ಮಾರ್ಷಲ್ ಸ್ಟಾಲಿನ್‌ರಿಗೆ ಇಂಥ ನಮ್ಮ ಶಾಸನ ಸಭೆಗಳು ಗೌರವವನ್ನು ಸಲ್ಲಿಸತಕ್ಕದ್ದಿರಲಿ, ಅವರಿಗೆ ಈ ದಿವಸ ಇಡೀ ವಿಶ್ವವೇ ಅವರಿಗೆ ಗೌರವವನ್ನು ಸೂಚಿಸಿ, ಅವರನ್ನು ಹೊಗಳುತ್ತಿದ್ದಾರೆ. ಆದ್ದರಿಂದ ಈ ಸಂದರ್ಭದಲ್ಲಿ ನಾವು ಆ ಪಕ್ಷ, ಈ ಪಕ್ಷ ಎಂಬ ಅಭಿಮಾನವಾವುದನ್ನೂ

ಇಡವೆ, ಎಲ್ಲವನ್ನೂ ಮರೆತು, ಸರ್ವರೂ ಏಕೋಭಾವದಿಂದ ಅವರ ಆತ್ಮಕ್ಕೆ ಗೌರವ ಕೊಡಬೇಕೆಂದು ಕಡೆಯದಾಗಿ ಪ್ರಾರ್ಥಿಸಿ ನಾನು ನನ್ನ ಭಾಷಣವನ್ನು ಮುಕ್ತಾಯಗೊಳಿಸುತ್ತೇನೆ.

*ಶ್ರೀ ವಿ. ಆರ್. ನಾಯ್ಡು (ಮಲ್ಲೇಶ್ವರಂ).—ಸ್ವಾಮಿ, ಈಗಾಗಲೇ ಅನೇಕ ಜನ ಮಾನ್ಯ ಸದಸ್ಯರು ಮಾತನಾಡಿರುತ್ತಾರೆ; ಮತ್ತು ಅವರ ಸಂತಾಪವನ್ನೂ ಸಹ ಸೂಚಿಸಿದ್ದಾರೆ. ಆದರೆ ನಾನು ಒಂದು ಅಂಶವನ್ನು ಮಾತ್ರ ಈ ಸಂತಾಪಸೂಚಕ ನಿರ್ಣಯದ ಸಂಬಂಧದಲ್ಲಿ ಈ ಸಭೆಯ ಗಮನಕ್ಕೆ ತರಬೇಕೆಂದಿದ್ದೇನೆ. ಇಡಿ ವಿಶ್ವಕ್ಕೇ ಸಂಬಂಧಿಸಿದಂಥ ಮಹಾ ವ್ಯಕ್ತಿಗಳು ಒಬ್ಬರೂ, ನಮ್ಮ ಭಾರತದೇಶಕ್ಕೆ ಸಂಬಂಧಪಟ್ಟಂಥ ವ್ಯಕ್ತಿ ಒಬ್ಬರೂ ಮತ್ತು ನಮ್ಮ ಸಂಸ್ಥಾನಕ್ಕೆ ಸಂಬಂಧಪಟ್ಟಂಥ ಉಳಿದ ವ್ಯಕ್ತಿಗಳೂ ಈ ದಿವಸ ಕಣ್ಮರೆಯಾಗಿದ್ದಾರೆ.

ಶ್ರೀ ಕೃಷ್ಣಸ್ವಾಮಿಪಿಳ್ಳೆಯವರನ್ನು ನಾನು ಚೆನ್ನಾಗಿ ಬಲ್ಲೆ. ಅವರು ಹಿಂದಿದ್ದ ಪ್ರಜಾಪ್ರತಿನಿಧಿ ಸಭೆಗೂ ಮತ್ತು ಬೆಂಗಳೂರು ಪೌರಸಭೆಗೂ ಸದಸ್ಯರಾಗಿದ್ದುಕೊಂಡು ರಾಜಕೀಯದಲ್ಲಿ ತಮ್ಮ ಕೈಲಾದ ಸೇವೆಯನ್ನು ದೇಶಕ್ಕೆ ಸಲ್ಲಿಸಿರುವುದೇ ಅಲ್ಲದೆ ಇನ್ನೂ ಅನೇಕ ಧರ್ಮದ ಕೆಲಸಕಾರ್ಯಗಳನ್ನೂ ಮಾಡಿಸಿ, ಅವರು ಒಬ್ಬ ಪ್ರಖ್ಯಾತರಾದಂಥ ವ್ಯಕ್ತಿಗಳಾಗಿದ್ದರೆಂದರೆ ತಪ್ಪಾಗಲಾರದು. ಅವರ ಭಾಷಣವನ್ನು ಇಲ್ಲ ಅನೇಕ ಮಹನೀಯರು ಸ್ವತಃ ಕೇಳಿರಬಹುದು. ಆದರೆ ನಾನು ಅವರ ಭಾಷಣಗಳನ್ನು ಪತ್ರಿಕೆಗಳ ಮೂಲಕ ಓದಿ ನೋಡಿದ್ದೇನೆ; ಅಲ್ಲದೆ ಕೆಲವನ್ನು ನಾನು ಪ್ರತ್ಯಕ್ಷವಾಗಿಯೂ ಕೇಳಿದ್ದೇನೆ. ಅವರ ಭಾಷಣವು ಬಹಳ ಗಾಂಭೀರ್ಯದಿಂದ ಕೂಡಿರುತ್ತಿದ್ದಿತೆಂದು ಹೇಳಲು ಯಾವ ಅಭ್ಯಂತರವೂ ಇಲ್ಲ. ಆದರೆ ಅವರಿಗೆ ಅಕಸ್ಮಾತ್ತು ಹೃದಯರೋಗ ಬಂದು ಅವರು ನತ್ತುಹೋದರು. ಅವರಿನ್ನೂ ಜೀವಿಸಿದ್ದಿದ್ದರೆ ದೇಶಕ್ಕೆ ಇನ್ನೂ ಹೆಚ್ಚಿನ ಸೇವೆ ಒದಗುತ್ತಿತ್ತೆಂದು ನನಗನ್ನಿಸುತ್ತದೆ.

ಇನ್ನು ಶ್ರೀ ಶಂಕರಲಿಂಗೇಗೌಡರನ್ನು ನಾನು ಚಿಕ್ಕವನಾಗಿದ್ದಾಗಿನಿಂದಲೂ ಬಲ್ಲೆ. ಅಂಕಿಅಂಶಗಳಲ್ಲಿ ಅವರು ಬಹಳ ಹೆಸರುವಾಸಿಯಾಗಿದ್ದವರು. ಅವರಿಂದ ತಿಳಿಯಬೇಕಾದ ಅಂಶಗಳು ಇನ್ನೂ ಬಹಳವಾಗಿದ್ದವು. ಅವರು ಭಾಷಣಮಾಡಲು ಎದ್ದಕೂಡಲೇ ಜನರೆಲ್ಲರನ್ನೂ ನಗೆಮುಖದಿಂದಿರುವಂತೆ ಮಾಡುತ್ತಿದ್ದರು. ಅವರ ಮಾತಿನಲ್ಲಿ ಅಷ್ಟು ಗಾಂಭೀರ್ಯ, ಸ್ವಾರಸ್ಯ ಮತ್ತು ವಿಚಾರಗಳು ಅಡಕವಾಗಿರುತ್ತಿದ್ದವು. ಇಂಥ ಒಬ್ಬ ದಕ್ಷರಾದಂಥ ವ್ಯಕ್ತಿಗಳು ನಮ್ಮ ಕಣ್ಮರೆಯಾಗಿ ಹೋದದ್ದು ಇಡೀ ದೇಶಕ್ಕೇ ಒಂದು ದೊಡ್ಡ ಪೆಟ್ಟು ಬಿದ್ದಹಾಗಾಗಿದೆ.

ಶ್ರೀ ಗೋಪಾಲಸ್ವಾಮಿ ಅಯ್ಯಂಗಾರ್ ಅವರು ಕಾಶ್ಮೀರದಲ್ಲಿ ದಿರ್ವಾರಾಗಿದ್ದು —ಇವರು ಮಾಡಿರತಕ್ಕ ವಿಚಾರಗಳೆಲ್ಲವೂ ಲೇಖನಗಳ ಮುಖೇನ ತಮಗೆಲ್ಲಾ ಈಗಾಗಲೇ ತಿಳಿದಿರುತ್ತದೆ. ಇವರು ಭಾರತದಿಂದ ಕಣ್ಮರೆಯಾಗಿರುವುದು ಬಹಳ ದುಃಖವಾಗಿದೆ.

ಇನ್ನು ಮಾನವಕೋಟಿಗೆ ಮಾರ್ಗದರ್ಶಕನಾಗಿದ್ದ ರಷ್ಯಾದೇಶದ ಶಾಂತಿಪುರುಷ ಮಾರ್ಷಲ್ ಸ್ಟ್ಯಾಲಿನ್‌ರು ಕಣ್ಮರೆಯಾಗಿರತಕ್ಕದ್ದು ಇಡೀ ಜಗತ್ತಿಗೇ ದಾರಿ ತೋರಿದಂತಾಗಿರುತ್ತದೆಯೆಂದರೆ ತಪ್ಪಾಗಲಾರದು. ಇವರನ್ನು ನಮ್ಮಲ್ಲಿನ ದೊಡ್ಡ ನಾಯಕರಿಗೆ ಎಂದರೆ ಗಾಂಧೀಜಿಯವರಿಗೆ ಸರಿಸಮಾನರೆಂದು ಹೇಳಿಸಿದರೆ ಅದೂ ತಪ್ಪಾಗಲಾರದೆಂದು ನಾನು ಭಾವಿಸುತ್ತೇನೆ. ಈ ಮಹಾಪುರುಷ ಕಾರ್ಮಿಕರ ಕಷ್ಟವನ್ನು ಎತ್ತಿಹಿಡಿದು ದೇಶದಲ್ಲಿ ಶಾಂತಿ ನೆಲೆಸುವಂತೆ ಜನರನ್ನು ಕಾಪಾಡಿದ ಮಹಾನುಭಾವ. ಇವರು ನತ್ತುಹೋಗಿರತಕ್ಕದ್ದನ್ನು ಎಂದರೆ ಇವರ ಕಳೇಬರವನ್ನು ನೋಡುವುದಕ್ಕಾಗಿ ಜಗತ್ತಿನ ನಾನಾ ಕಡೆಯ ಜನರೂ ಅಲ್ಲಿ 10 ಮೈಲಿಗೂ ಹೆಚ್ಚಾಗಿರುವಂಥ 'ಕ್ಯೂ' ನಲ್ಲಿ ನಿಂತಿದ್ದಾರೆಂದು ಹೇಳುತ್ತಿರುವಾಗ ಇವರ ಮೇಲೆ ಜನರಿಗೆ ಎಷ್ಟರಮಟ್ಟಿನ ಅಭಿಮಾನವಿರುತ್ತದೆಂಬುದು ಕಂಡುಬರುತ್ತಿದೆ. ಯುದ್ಧ ಕಾಲದಲ್ಲಿ ಇಡೀ ಜಗತ್ತೇ ರಷ್ಯಾ ಕಡೆಗೆ ನೋಡುತ್ತಿತ್ತು. ಇಡೀ ಮಾನವಕೋಟಿಯೇ ಇವರಿಗೆ ಗೌರವವನ್ನು ಕೊಡುತ್ತಿದೆ. ಇಂಥವರ ಆತ್ಮಕ್ಕೆ ಶಾಂತಿಯನ್ನು ಕೋರಬೇಕೆಂದು ಹೇಳಿ—ಇದಕ್ಕಿಂತಲೂ ಹೆಚ್ಚಾಗಿ ಏನನ್ನೂ ಹೇಳಲು ಇಷ್ಟಪಡದೆ ನಾನು ನನ್ನ ಭಾಷಣವನ್ನು ಮುಗಿಸುತ್ತೇನೆ.

Mr. SPEAKER.—There seem to be a considerable number of members who are desirous of taking part in this reference.

The House will now rise for Lunch and meet again at 3-30 P.M.

The Assembly adjourned for Lunch at Three of the Clock and re-assembled at Thirty Minutes past Three of the Clock.

(MR. SPEAKER in the Chair.)

3-30 P.M.

ಶ್ರೀ ಎಸ್. ಸಿದ್ದಪ್ಪ (ಮಾಗಡಿ).—ಸ್ವಾಮಿ, ಈಗ ಸಭೆಯ ಮುಂದಿರುವ ಸಂತಾಪಸೂಚನೆಯ ವಿಚಾರದಲ್ಲಿ ಬಹಳ ದೀರ್ಘಕಾಲದಿಂದಲೂ ಚರ್ಚೆಯು ನಡೆಯುತ್ತಿದೆ. ಈ ಐದು ಜನರ ವಿಷಯದಲ್ಲಿಯೂ ಈ ಸಭೆಯು ತನ್ನ ಅಗಾಧ ಶೋಕವನ್ನು ತೋರ್ಪಡಿಸಿದೆ. ಅವರೆಲ್ಲರ ವಿಚಾರವನ್ನೂ ನಾನು ಮತ್ತೆ ಪ್ರಸ್ತಾಪಿಸಬೇಕಾಗಿಲ್ಲ.

ನಮ್ಮ ದೇಶದವರಾದ ಶ್ರೀಮಾನ್ ಶಂಕರಲಿಂಗೇಗೌಡರು ಇಲ್ಲಿನ ಪ್ರಜಾಪ್ರತಿನಿಧಿಸಭೆ ಮತ್ತು ಅನೇಕ ಸಣ್ಣ ಸಂಸ್ಥೆಗಳಲ್ಲಿ ಕೆಲಸಮಾಡಿ ದಕ್ಷತೆಯನ್ನು ಪಡೆದಿದ್ದರಲ್ಲದೆ, ಹೊರಪ್ರಾಂತವಾದ ನವಾನಗರಕ್ಕೂ ದಯಮಾಡಿಸಿ ಅಲ್ಲಿ ಎಕನಾಮಿಕ್ ಅಡ್ವೈಸರ್ ಆಗಿ ಕೆಲಸಮಾಡಿ ಒಳ್ಳೆಯ ಹೆಸರು ಗಳಿಸಿದ್ದರು. ಅಂಥ ಮಹನೀಯರು ಈ ಸಭೆಯವರನ್ನಗಲಿಹೋದರೆಂಬುದು ನಮಗೆ ಹೆಚ್ಚಿನ ವ್ಯಸನವನ್ನುಂಟುಮಾಡಿದೆ. ಅವರ ಬಂಧುಭಗಿನಿಯರಿಗೆ ಉಂಟಾಗಿರುವ ಈ ದುಃಖವನ್ನು ಭಗವಂತನು ನಿವಾರಣೆಮಾಡಲೆಂದು ಈ ಸಭೆಯ ಮೂಲಕ ನಾನು ವಿನಂತಿಮಾಡಿಕೊಳ್ಳುತ್ತೇನೆ.

ಎರಡನೆಯದಾಗಿ, ಪತ್ತಿ ಬಸಪ್ಪನವರು ಚಿತ್ರದುರ್ಗ ಜಿಲ್ಲೆಯ ಮೊಳಕಾಲ್ಮೂರು ತಾಲ್ಲೂಕಿನಿಂದ ಸುಮಾರು 10-15 ವರ್ಷಕಾಲ ಬರುವವರಾಗಿದ್ದು ಜಿಲ್ಲಾ ಬೋರ್ಡು ಮತ್ತು ಪ್ರಜಾಪ್ರತಿನಿಧಿ ಸಭೆಯಲ್ಲಿ ಬಹಳ ಕಾಲದಿಂದಲೂ ಸೇವೆಮಾಡಿ ತಮ್ಮ ಜೀವನವನ್ನು ಸಾರ್ಥಕಗೊಳಿಸಿಕೊಂಡಿದ್ದಾರೆ. ಅವರೂ ಕೂಡ ನಮ್ಮಿಂದ ಇಂದು ಕಣ್ಮರೆಯಾಗಿದ್ದಾರೆ. ಅವರ ಕುಟುಂಬ ವರ್ಗದವರಿಗೂ ದಯಾಮಯನಾದ ಭಗವಂತನು ಈ ದುಃಖವನ್ನು ಭರಿಸಲು ಶಕ್ತಿಸಾಮರ್ಥ್ಯಗಳನ್ನು ಕೊಡಲೆಂದು ಈ ಸಭೆಯ ಮೂಲಕ ಪ್ರಾರ್ಥಿಸುತ್ತೇನೆ.

(ಶ್ರೀ ಎಸ್. ಸಿದ್ದಪ್ಪ).

ಆಮೇಲೆ, ಮಲ್ಲೇಶ್ವರ ಕ್ಷೇತ್ರದಿಂದ ಕಾರ್ಮಿಕರ ಪರವಾಗಿ ಬಹಳ ಕಾಲದಿಂದಲೂ ಚುನಾಯಿತರಾಗಿ ಬರುತ್ತಿದ್ದ ಕೃಷ್ಣಸ್ವಾಮಿಪಿಳ್ಳೈಯವರು ಈ ಸಭೆಯಲ್ಲಿ ಅರ್ಜುನನಂತೆ ಇರುತ್ತಿದ್ದರು. ಬಹಳ ಪರಾಕ್ರಮಶಾಲಿಗಳು. ಅಂತೆಯೇ ಉದಾರಿಗಳು. ಅವರು ಅನೇಕ ಸಂಸ್ಥೆಗಳಿಗೆ ಸಹಾಯಮಾಡುತ್ತಾ ಬಹಳ ದಕ್ಷರೆನಿಸಿಕೊಂಡಿದ್ದಾರೆ. ಅವರೂ ಇಂದು ಕಣ್ಮರೆಯಾಗಿದ್ದಾರೆ. ಅಂಥ ಮಹನೀಯರನ್ನು ಕಳೆದುಕೊಂಡ ಆ ಕುಟುಂಬ ವರ್ಗದವರಿಗೆ ಭಗವಂತನು ದುಃಖವನ್ನು ನಿವಾರಣೆ ಮಾಡಲಿ ಎಂದು ನಾನು ಈ ಸಭೆಯ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ನಮ್ಮ ದೇಶದಲ್ಲಿ ಬಹಳ ಹಳೆಯ ಕಾಲದಿಂದಲೂ, ಇಂಗ್ಲಿಷರ ಕಾಲದಿಂದಲೂ ಸರ್ಕಾರದಲ್ಲಿ ಕೆಲಸಮಾಡುತ್ತಿದ್ದು ದಕ್ಷರೆನಿಸಿಕೊಂಡು ನೈಪುಣ್ಯತೆಯಿಂದ ಕೆಲಸಮಾಡಿ ದೇಶಸೇವೆಯನ್ನೆಸಗಿ ಆಂಗ್ಲೇಯರಲ್ಲೂ ಮತ್ತು ಭಾರತೀಯರಲ್ಲೂ ಹೆಚ್ಚಿನ ಗೌರವವನ್ನು ಗಳಿಸಿ ದೇಶಕ್ಕೆ ಏಗಿಲಾದ ಸೇವೆಮಾಡಿದವರಲ್ಲಿ ಶ್ರೀಮಾನ್ ಎಂ. ಜಿ. ಅಯ್ಯಂಗಾರ್‌ರವರು ಬಹಳ ದೊಡ್ಡವರು. ಅವರೂ ಈ ದಿವಸ ಕಣ್ಮರೆಯಾಗಿದ್ದಾರೆ. ಇದರಿಂದ ಉದ್ಭವಿಸಿರುವ ಅಪಾರ ದುಃಖವನ್ನು ಭಗವಂತನು ನಿವಾರಣೆಮಾಡಲಿ, ಅವರ ಕುಟುಂಬವರ್ಗದವರಿಗೆ ಭಗವಂತನು ಸಹಾಯನೀಡಲಿ ಎಂದು ಈ ಸಭೆಯ ಮೂಲಕ ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು, ಸ್ಕಾರ್ಲಿರೆಂದರೆ ಬಹಳ ದೊಡ್ಡ ವ್ಯಕ್ತಿಗಳಲ್ಲಿ ಬಹಳ ಮೇಧಾವಿಗಳು. ಅವರ ವಿಷಯದಲ್ಲಿ ಈ ಸಭೆಯಲ್ಲಿ ಬಹಳ ದೊಡ್ಡ ದೊಡ್ಡ ಪ್ರಶಂಸೆಗಳನ್ನು ಮಾಡಿದ್ದಾರೆ. ಅವರ ಗೌರವ, ಅವರು ಗಳಿಸಿರತಕ್ಕ ಕೀರ್ತಿ ಅವರು ದೇಶಕ್ಕೆ ಮಾಡಿರತಕ್ಕ ಸಹಾಯ, ಅವರ ವ್ಯಕ್ತಿತ್ವ, ಅವರಿಂದ ನಡೆದಿರತಕ್ಕ ದೊಡ್ಡ ದೊಡ್ಡ ಕೆಲಸಗಳು—ಇವುಗಳ ವಿಷಯದಲ್ಲಿ ಮಾನ್ಯ ಸ್ನೇಹಿತರನೇಕರು ಮುಕ್ತಕಂಠದಿಂದ ಹೊಗಳಿ ಮಾತನಾಡಿದ್ದಾರೆ. ಅಂದಮೇಲೆ ನಾನು ಈ ಸಭೆಯ ಕಾಲವನ್ನು ಹೆಚ್ಚು ತೆಗೆದುಕೊಳ್ಳದೆ ಅವರ ವಿಷಯದಲ್ಲಿ ಮೈಸೂರು ಸಂಸ್ಥಾನಕ್ಕೂ ನಮಗೂ ಇರತಕ್ಕ ಗೌರವ, ಪ್ರೀತಿಯನ್ನು ವ್ಯಕ್ತಪಡಿಸಿ ಅವರು ದೇಶಕ್ಕೆ ನಲ್ಲಿಸಿರತಕ್ಕ ಸೇವೆಯನ್ನು ಮನಸ್ಸಿಗೆ ತೆಗೆದುಕೊಂಡು ಅವರ ಕುಟುಂಬವರ್ಗದವರಿಗೆ ಈ ಸಾವಿನಿಂದ ಉಂಟಾಗಿರತಕ್ಕ ವ್ಯಥೆಯನ್ನೂ, ಪ್ರಪಂಚಕ್ಕೆ ಉಂಟಾಗಿರತಕ್ಕ ನಷ್ಟವನ್ನೂ ಪರಿಹರಿಸಲು ದಯಾಮಯನಾದ ಭಗವಂತನು ಕರುಣೆ ತೋರಲಿ ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥಿಸುತ್ತೇನೆ.

ಈಗ ಈ ಐದು ಜನರ ಜೀವನಚರಿತ್ರೆಯನ್ನೂ ಈ ಸಭೆಯಲ್ಲಿ ಬಹಳ ಕಾಲದಿಂದ ಮಾತನಾಡಿ ಅವರ ಗೌರವ, ಅವರ ಕೀರ್ತಿ, ಅವರು ದೇಶಕ್ಕೆ ನಲ್ಲಿಸಿರತಕ್ಕ ಅನೇಕ ಸೇವೆ ಎಲ್ಲವನ್ನೂ ಅತಿಶಯವಾಗಿ ಹೇಳಿದ್ದಾಗಿದೆ. ಭಗವಂತನು ಅವರ ಆತ್ಮಕ್ಕೆ ಶಾಂತಿಯನ್ನು ಕೊಟ್ಟು ಸನ್ಮಾರ್ಗದಲ್ಲಿ ಒಯ್ಯಲಿ, ಕುಟುಂಬವರ್ಗದವರಿಗೆ ಉಂಟಾಗಿರುವ ದುಃಖವನ್ನು ಪಾರುಮಾಡಲಿ ಎಂದು ಹೇಳಿ ನನ್ನ ಭಾಷಣವನ್ನು ಮುಗಿಸುತ್ತೇನೆ.

ಶ್ರೀ ಎಸ್. ಗೋಪಾಲಗೌಡ (ಸಾಗರ–ಹೊಸನಗರ).—ಮಾನ್ಯ ಅಧ್ಯಕ್ಷರೆ, ಈಗ ಸಭೆಯ ಮುಂದಿರುವ ಸಂತಾಪ ಸೂಚನೆಯ ಸಂಬಂಧದಲ್ಲಿ ನಾನು ನನ್ನ ಅನುತಾಪವನ್ನು ವ್ಯಕ್ತಪಡಿಸುತ್ತಾ ಈ ವ್ಯಕ್ತಿಗಳ ಬಗ್ಗೆ ಒಂದೆರಡು ಮಾತುಗಳನ್ನು ಹೇಳಬೇಕೆಂದಾಶಿಸುತ್ತೇನೆ. ಕಾಂರೇಡ್ ಸ್ಕಾರ್ಲಿ ಅವರು ಇಂದು ವಿಶ್ವದಿಂದ ಅಗಲಿದ್ದಾರೆ. ಮಾರ್ಕ್ಸ್, ಎಂಜೆಲ್ಸ್ ಮತ್ತು ಲೆನಿನ್ ಈ ಮಹಾಪುರುಷರು ಜಗತ್ತಿಗಿತ್ತ ಒಂದು ಸಂದೇಶವನ್ನು ತನ್ನ ಜೀವಿತ ಕಾಲದಲ್ಲಿ ಕಾರ್ಯಗತಮಾಡಿ, ಒಂದು ನೂತನ ಮಾನವ ಸಮಾಜವನ್ನು ನಿರ್ಮಾಣಮಾಡಿದ ನಿರ್ಮಾತೃ ಕಾಂರೇಡ್ ಸ್ಕಾರ್ಲಿ. ಅವರ ಧ್ಯೇಯ ಮತ್ತು ಧೋರಣೆಗಳ ಬಗ್ಗೆ ಭಿನ್ನಾಭಿಪ್ರಾಯವಿರಬಹುದಾದರೂ ಕೂಡ ಅವರ ವ್ಯಕ್ತಿತ್ವದ ಬಗ್ಗೆ ಮತ್ತು ಅವರ ಅಸಾಧಾರಣವಾದ ಪ್ರತಿಭೆ ದಕ್ಷತೆಗಳ ಬಗ್ಗೆ ಪ್ರಪಂಚದಲ್ಲಿ ಯಾರಿಗೂ ಭಿನ್ನಾಭಿಪ್ರಾಯವಿರಲು ಸಾಧ್ಯವಿಲ್ಲ. ಈ ಸಂದರ್ಭದಲ್ಲಿ ಜಾರ್ಜ್ ಬರ್ನಾರ್ಡ್ ಷಾರವರು ಹೇಳಿದ ಒಂದು ಮಾತು ನೆನಪಿಗೆ ಬರುತ್ತದೆ. ಪ್ರಪಂಚದಲ್ಲಿ ಮೂರು ಜನ ಮಹಾವ್ಯಕ್ತಿಗಳಿದ್ದಾರೆ. ಒಬ್ಬ ಆಡಳಿತಗಾರ, ಅವನು ಸ್ಕಾರ್ಲಿ; ಒಬ್ಬ ವಿಜ್ಞಾನಿ, ಅವನು ಐನ್‌ಸ್ಟೈನ್; ಇನ್ನೊಬ್ಬ ಬರ್ನಾರ್ಡ್ ಷಾ. ಅವನ ಹೆಸರನ್ನು ಹೇಳಲು ನನಗೆ ನಾಚಿಕೆಯಾಗುತ್ತದೆ ಎಂದು ಹೇಳಿದರು. ಎಂದರೆ ಅವರೇ ಬರ್ನಾರ್ಡ್‌ಷಾ. ಇದರಲ್ಲಿ ಉತ್ಪ್ರೇಕ್ಷೆಯೇನೂ ಇಲ್ಲ. ಸ್ಕಾರ್ಲಿರನ್ನೂ ವಿಶ್ವವನ್ನೂ ಎರಡು ಕಡೆಯಲ್ಲಿಟ್ಟು ತೂಗಿದರೆ, ನಮಭಾರ ತೂಗಿದ ವ್ಯಕ್ತಿ ಸ್ಕಾರ್ಲಿ. ರಷ್ಯ ದಂಥ ಮಹಾರಾಷ್ಟ್ರವನ್ನು ಏಕ್ಕೆಕವಾಗಿ ಪ್ರತಿನಿಧಿಸುತ್ತಿದ್ದ ಒಬ್ಬ ಮಹಾವ್ಯಕ್ತಿ ಅವರು, ಅಲ್ಲಿ ಅವರನ್ನಲ್ಲದೆ ಬೇರೆಯವರನ್ನು ನಾವು ಕಾಣುತ್ತಿರಲಿಲ್ಲ. ಅಷ್ಟು ಅಜೇಯನಾಗಿ ಬೆಳೆದು ನಿಂತಿದ್ದ ಒಬ್ಬ ಮಹಾವ್ಯಕ್ತಿ ಇಂದು ವಿಶ್ವದಲ್ಲಿ ಇಲ್ಲ. ಅವರು ವಿಶ್ವಕ್ಕೆ ಒಬ್ಬ ಶಾಂತಿದೂತರಾಗಿದ್ದರು ಎಂಬುದರಲ್ಲಿ ಯಾರಿಗೂ ಸಂಶಯವಿಲ್ಲ. ಕಳೆದ ಎರಡನೆಯ ಮಹಾಯುದ್ಧದಲ್ಲಿ ವಿಶ್ವವನ್ನೇ ವ್ಯಾಪಿಸುತ್ತಿದ್ದ ಫ್ಯಾಸಿಸಂ ಅನ್ನು ಎಷ್ಟರ ಮಟ್ಟಿಗೆ ತಡೆಗಟ್ಟಿದರು ಮತ್ತು ಅವರು ಮಾಡಿದ ತ್ಯಾಗ ಎಷ್ಟರಮಟ್ಟಿನದು ಎಂಬುದು ಜಗತ್ತಿನ ಇತಿಹಾಸದಲ್ಲಿ ಬರೆಯಲ್ಪಟ್ಟಿದೆ. ಹಾಗೂ ವಿಶ್ವದ ಇತಿಹಾಸದಲ್ಲಿ ವಿರಳವಾಗಿ ಕಂಡುಹೋಗುವ ಮಹಾವ್ಯಕ್ತಿಗಳಲ್ಲೊಬ್ಬರಾದ ಸ್ಕಾರ್ಲಿರವರ ಬಗ್ಗೆ ಈ ಹೊತ್ತು ಇಡೀ ವಿಶ್ವವೇ ಹೆಮ್ಮೆಪಡುತ್ತಿದೆ. ಅವರ ಜೀವಿತಕಾಲದಲ್ಲಿ ತಮ್ಮ ದೇಶಕ್ಕೇ ಅಲ್ಲದೆ ಇಡೀ ಮಾನವನ ಉದ್ಧಾರಕ್ಕಾಗಿ ಸ್ವಾರ್ಥವನ್ನು ಬದಿಗಿಟ್ಟು ದುಡಿದಿರುವುದನ್ನು ನೋಡಿ ಇಡೀ ವಿಶ್ವದ ಜನತೆ ಹೆಮ್ಮೆಪಡುತ್ತಿದೆ; ಮತ್ತು ಅವರ ಮರಣದಿಂದ ಶೋಕಿಸುತ್ತಿದೆ. ಈ ಸಂದರ್ಭದಲ್ಲಿ ನಾವು ಕೂಡ ಅವರ ಮರಣದಿಂದ ನೇರವಾಗಿ ರಷ್ಯದ ಸರ್ಕಾರ ಮತ್ತು ಜನತೆಗೆ ಆಗಿರುವ ಅಪಾರ ನಷ್ಟ ಮತ್ತು ದುಃಖದಲ್ಲಿ ನಮ್ಮ ನಷ್ಟ ಮತ್ತು ದುಃಖವನ್ನೂ ಈ ಮೂಲಕ ವ್ಯಕ್ತಪಡಿಸಬೇಕಾದುದು ನಮ್ಮ ಕರ್ತವ್ಯವಾಗಿದೆ.

ಇನ್ನು ಕಳೆದ ಅಧಿವೇಶನದವರೆಗೂ ನಮ್ಮ ಜತೆಯಲ್ಲಿದ್ದ ಶಂಕರಲಿಂಗೇಗೌಡರ ವಿಷಯದಲ್ಲಿ ಎರಡು ಮಾತನ್ನಾಡಿದರೆ ತಪ್ಪಾಗಲಾರದು. ಈಗಾಗಲೇ ಸದಸ್ಯರನೇಕರು ಅವರ ವ್ಯಕ್ತಿತ್ವದ ಬಗ್ಗೆ ಮಾತನಾಡಿದ್ದಾರೆ. ನಾನು ಇತ್ತೀಚೆಗೆ ಅವರ ಸಂಪರ್ಕವನ್ನು ಹೆಚ್ಚಿಗಿ ಬೆಳೆಸಿಕೊಂಡಿದ್ದೆನಾದರೂ ಅವರನ್ನು ನಾನು ಇರುವತನಕ ಮರೆಯುವಂತಿಲ್ಲ. ಅವರ ವ್ಯಕ್ತಿತ್ವದಲ್ಲಿ ಅವರದೇ ಆದ ಒಂದು ವ್ಯಕ್ತಿತ್ವವಿತ್ತು. ಅವರನ್ನು ಬೇರೆಯವರಿಗೆ ಹೋಲಿಸಿದರೆ ತಪ್ಪಾಗಬಹುದು. ಅವರು ತಮ್ಮದೇ ಆದ ಒಂದು ದೃಷ್ಟಿಕೋಣವನ್ನು ಬೆಳೆಸಿಕೊಂಡು ಬಂದಿದ್ದರು. ಯಾವ ಕಟ್ಟುವಾದ ಸಂದರ್ಭದಲ್ಲಿಯಾದರೂ ತಮ್ಮ ಅಭಿಪ್ರಾಯವನ್ನು ತಮ್ಮದೇ ಆದ ಒಂದು ಹಾಸ್ಯದೊಂದಿಗೆ ಜನರ ಮುಂದಿಡುವುದು ಅವರ ಸ್ವಭಾವವಾ

ಗಿತ್ತು. ಮತ್ತು ಎಂಥಾ ಸಂದರ್ಭದಲ್ಲಾದರೂ ನತ್ಯದಿಂದ ನಡೆಯುವುದಕ್ಕೂ ಅನ್ಯಾಯವನ್ನು ಪ್ರತಿಭಟಿಸುವುದಕ್ಕೂ ಅವರು ಹಿಂಜರಿಯುತ್ತಿರಲಿಲ್ಲ. ಅವರು ತಮ್ಮ ಜೀವಿತಕಾಲದಲ್ಲಿ ದೇಶಕ್ಕೂ ಜನತೆಗೂ ಶಕ್ತಿ ಮೀರಿ ದುಡಿದಿದ್ದಾರೆ. ಒಮ್ಮೆ ಅವರು ನನ್ನೊಡನೆ ಒಂದು ಮಾತನ್ನು ಹೇಳಿದುದುಂಟು. 'ನಾನು ಸರ್ಕಾರಕ್ಕೆ ಒಂದು ಯೋಜನೆಯನ್ನು ತಯಾರುಮಾಡಿಕೊಟ್ಟಿದ್ದೇನೆ, ಅವರು ಅದನ್ನು ಅಚ್ಚು ಹಾಕಿಸಬೇಕು; ಕಾರಣ, ನನ್ನಲ್ಲಿ ಹಣವಿಲ್ಲ, ಮತ್ತು ಅದನ್ನು ಯಾರಾದರೂ ಕಾರ್ಯಗತಮಾಡುವುದಾದರೆ ದೇಶಕ್ಕೆ ಹೆಚ್ಚಿನ ಉಪಕಾರವಾದೀತು' ಎಂದು. ಬಹುಶಃ ಅವರ ಆ ಯೋಜನೆ ಸರ್ಕಾರವಲ್ಲದೆಯೆಂದು ನಾನು ಭಾವಿಸುತ್ತೇನೆ.

ಹೀಗೆ ನಮ್ಮನ್ನಗಲಿ ಹೋಗಿರುವ ಇತರ ವ್ಯಕ್ತಿಗಳ ಬಗ್ಗೆ ಕೇಂದ್ರ ಸರ್ಕಾರದ ಮಂತ್ರಿಗಳಾಗಿದ್ದ ಗೋಪಾಲಸ್ವಾಮಿ ಅಯ್ಯಂಗಾರ್ಯರು ಮತ್ತು ಈ ಸಭೆಯ ಮಾಜಿ ಸದಸ್ಯರಾಗಿದ್ದ ಕೃಷ್ಣಸ್ವಾಮಿಪಿಳ್ಳೆ ಮತ್ತು ಪತ್ತಿ ಬನಪ್ಪನವರ ಬಗ್ಗೆಯೂ ನಾನು ನನ್ನ ಸಂತಾಪವನ್ನು ವ್ಯಕ್ತಪಡಿಸುತ್ತೇನೆ.

ಶ್ರೀ ಬಿ. ಟಿ. ಕೆಂಪರಾಜ್ (ಬೆಂಗಳೂರು ದಕ್ಷಿಣ–ಅನುಸೂಚಿತ ಜಾತಿಗಳು).—ಅಧ್ಯಕ್ಷರೆ, ಸಭೆಯ ಮುಂದಿಟ್ಟಿರತಕ್ಕ ಈ ಸಂತಾಪಸೂಚಕ ನಿರ್ಣಯವನ್ನನುಮೋದಿಸುತ್ತಾ ಒಂದೆರಡು ವಿಚಾರಗಳನ್ನು ಹೇಳಬಯಸುತ್ತೇನೆ. ಇದುವರೆಗೆ ಅನೇಕ ಸ್ನೇಹಿತರು ಪರಲೋಕವನ್ನೈದಿರುವ ಈ ವ್ಯಕ್ತಿಗಳ ವಿಚಾರವಾಗಿ ಅನೇಕ ವಿಷಯಗಳನ್ನು ಹೇಳಿದ್ದಾರೆ. ಮುಖ್ಯವಾಗಿ, ಮಾರ್ಷಲ್ ಸ್ಟಾಲಿನ್ ಅವರು ಈ ಪ್ರಪಂಚವನ್ನು ಬಿಟ್ಟು ಸ್ವರ್ಗವಾಸಿಗಳಾದುದ್ದು ಇಡೀ ವಿಶ್ವಕ್ಕೇ ಒಹಳ ಕುಂದನ್ನುಂಟು ಮಾಡಿದೆಯೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ರಷ್ಯಾದೇಶಕ್ಕೆ ಒಂದು ಹೊಸ ಜೀವಕಳೆಯನ್ನು ತುಂಬಿ ಅಲ್ಲಿನ ಜನರ ಜೀವನ ಮತ್ತು ಅವರ ನಡೆನುಡಿಗಳನ್ನು ಬದಲಾಯಿಸಿ, ಇಡೀ ಪ್ರಪಂಚಕ್ಕೇ ಒಂದು ಆದರ್ಶವನ್ನು ತೋರಿಸಿಕೊಟ್ಟಂಥ ವ್ಯಕ್ತಿ ಸ್ಟಾಲಿನ್ ರವರು.

ಶ್ರೀ ಗೋಪಾಲಗೌಡರು ಹೇಳಿದಂತೆ, ಮಾರ್ಷಲ್ ಸ್ಟಾಲಿನ್ನರು ಒಬ್ಬ ದ್ವೈವಾಂಶ ಸಂಭೂತರೇ ಹೌದು. ಇವರು ಅರ್ಥಶಾಸ್ತ್ರ ಪ್ರವೀಣರು. ಇವರದೇ ಆದಂಥ ಹಿಂದು ಹೊಸ ಆರ್ಥಿಕಯೋಜನೆಯನ್ನು ಮಾಡಿ, ಅದನ್ನು ಇಲ್ಲಿನ ಜನರ ಜೀವನದಲ್ಲಿ ತುಂಬಿದರು. ಇಡೀ ಸಮಾಜವನ್ನೇ ಬದಲಾಯಿಸಿದಂಥ ಮಹಾವ್ಯಕ್ತಿಗಳಲ್ಲಿ ಮಾರ್ಷಲ್ ಸ್ಟಾಲಿನ್ನರು ಅಗ್ರಸ್ಥಾನವನ್ನು ಪಡೆದಿದ್ದಾರೆ. ಇವರು ಸೃಷ್ಟಿಸಿದ ಒಂದು ಕ್ರಾಂತಿಕರವಾದ ಯೋಜನೆಯು ಇಡೀ ಸಾಮ್ರಾಜ್ಯಶಾಹಿಯನ್ನೇ ಮೆಟ್ಟಿ, ಎದುರಿಗೆ ಬಂದಂಥ ಎಡರು ತೊಡರುಗಳನೆಲ್ಲಾ ನಿಗ್ರಹ ಮಾಡಿ ಜಗತ್ತಿಗೆ ಒಂದು ಹೊಸ ಮಾರ್ಗವನ್ನು ತೋರಿಸಿಕೊಟ್ಟಿತು. ಇಂಥವರ ಬಗ್ಗೆ ಯಾರಿಗೆತಾನೆ ಮನ್ನಣೆ ಇರಲಾರದು? ಮಾರ್ಷಲ್ ಸ್ಟಾಲಿನ್ನರು ಜೀವಂತರಾಗಿರುವಾಗ ಇನ್ನು ಪ್ರಪಂಚದಲ್ಲಿ ಮೂರನೆಯ ಸಾರಿಗೆ ಯುದ್ಧವಾಗುವಂಥ ಅವಕಾಶವನ್ನು ಖಂಡಿತ ಕೊಡಕೂಡದೆಂಬುದು ಅವರ ಇಡೀ ಜನಾಂಗದ ಉದ್ದೇಶವಾಗಿರುತ್ತೆಂದು ಹೇಳಿರುತ್ತಾರೆ. ನಮ್ಮ ಮಹಾನಾಯಕರಾದ ನೆಹರೂರವರಂತೆಯೇ ಮಾರ್ಷಲ್ ಸ್ಟಾಲಿನ್‌ರವರೂ ಸಹ ಬಹಳ ಶಾಂತಿ ಪುರುಷರಾಗಿದ್ದರು. ಯುದ್ಧಗಳ ಬಲೆಗೆ ಸಿಕ್ಕದಂತೆ ಹೇಗೆ ನಮ್ಮ ನೆಹರೂರವರು ಆಡಳಿತವನ್ನು ನಡೆಸಿಕೊಂಡು ಹೋಗುತ್ತಿದ್ದಾರೋ ಅದೇ ರೀತಿ ಮಾರ್ಷಲ್ ಸ್ಟಾಲಿನ್ನರು ಯುದ್ಧಗಳಿಗೆ ಮನಸ್ಸು ಕೊಡದೆ ಕೇವಲ ಶಾಂತಿಗೇ ಪ್ರೋತ್ಸಾಹ ಕೊಡುತ್ತಿದ್ದರೆಂದರೆ ಅದು ತಪ್ಪಾಗಲಾರದು. ಮಾರ್ಷಲ್ ಸ್ಟಾಲಿನ್ನರು ಒಂದು ಹೊಸ ಜಗತ್ತನ್ನೇ, ಒಂದು ಹೊಸ ಸಮಾಜವನ್ನೇ, ಅಷ್ಟೇ ಏಕೆ ಒಂದು ಹೊಸ ಯುಗವನ್ನೇ ನಿರ್ಮಾಣಮಾಡಿ ಹೆಸರು ಪಾತಿಯಾಗಿ ಕೀರ್ತಿ ಮತ್ತು ಸ್ಥಾನಗಳನ್ನು ಗಳಿಸಿಕೊಂಡಿರುತ್ತಾರೆ. ಇಡೀ ವಿಶ್ವಪ್ರಖ್ಯಾತಿ ಪಡೆದಂಥ ವ್ಯಕ್ತಿ ಈ ಮಾರ್ಷಲ್ ಸ್ಟಾಲಿನ್ನರು. ಇಂಥ ಮಹಾ ವ್ಯಕ್ತಿಗಳು ಈ ದಿವನ ಈ ಪ್ರಪಂಚವನ್ನು ಬಿಟ್ಟು ಹೋಗಿರುವುದರಿಂದ ಇಡೀ ಕಾರ್ಮಿಕ ಜನಾಂಗಕ್ಕೇ ಒಂದು ಅಪಾರ ನಷ್ಟ ಸಂಭವಿಸಿದೆ. ಅಂಥವರ ವಿಚಾರವಾಗಿ ಈ ಸಭೆಯು ತನ್ನ ಅನುತಾಪವನ್ನು ಸೂಚಿಸುವುದು ಸಮಯೋಚಿತವೂ ಮತ್ತು ಅನುಗುಣವೂ ಆಗಿದೆ.

ಇನ್ನು ಶ್ರೀಮಾನ್ ಶಂಕರಲಿಂಗೇಗೌಡರ ವಿಚಾರವಾಗಿ ಅನೇಕ ಮಿತ್ರರು ಅನೇಕ ವಿಚಾರಗಳನ್ನು ಈಗಾಗಲೇ ಹೇಳಿರುತ್ತಾರೆ. ಅವರ ವಿಚಾರವನ್ನು ಕೇಳಿ, ಅವರನ್ನು ನೋಡದೆ ಇರುವಂಥ ಮತ್ತು ಅವರನ್ನು ಸರಿಯಾಗಿ ಅರ್ಥಮಾಡಿಕೊಳ್ಳದಂಥ ವ್ಯಕ್ತಿಗಳು ಇಡೀ ನಮ್ಮ ಮೈಸೂರು ರಾಜಕೀಯ ರಂಗದಲ್ಲೇ ಅತಿವಿರಳವೆಂದು ನನ್ನ ಅಭಿಪ್ರಾಯ. ಶ್ರೀಯುತ ಶಂಕರಲಿಂಗೇಗೌಡರು ಈ ನಮ್ಮ ಹೋದ ಅಧಿವೇಶನದಲ್ಲಿದ್ದಂಥವರು. ಇವರು ಮಾತನಾಡಲು ಎದ್ದು ನಿಂತರೆ ಸಾಕು, ಇಡೀ ಸಭೆಯೆಲ್ಲಾ ಹಾಸ್ಯದಲ್ಲೇ ತುಂಬಿ ತುಳುಕುತಿತ್ತು, ಹಾಗೆ ಮಾತನಾಡುತ್ತಿದ್ದರು. ಆದರೆ ಅವರ ಭಾಷಣವು ಅಷ್ಟು ಹಾಸ್ಯರಸಮಯವಾಗಿದ್ದರೂ ಅದರಲ್ಲಿ ರಚನಾತ್ಮಕ ಸಲಹೆಗಳು ತುಂಬಿದ್ದು ಅವರ ಭಾಷಣವು ಒಂದು ರೀತಿಯಲ್ಲಿ ಅರ್ಥಗರ್ಭಿತವಾಗಿರುತ್ತಿತ್ತು. ಅಲ್ಲದೆ, ನಾವು ಅನುಸರಿಸಬೇಕಾದಂಥ ಅನೇಕ ವಿಷಯಗಳು ಅವರ ಭಾಷಣದಲ್ಲಿ ಅಡಕವಾಗಿರುತ್ತಿದ್ದವು. ಅಂಕಿ ಅಂಶಗಳಲ್ಲಿ ಅವರು ಬಹಳ ಪರಿಣತರಾಗಿದ್ದರು. ಹಿಂದೆ ನಾನು ಇಂಥ ಸಭೆಗಳಿಗೆ ಬಂದು ಪ್ರೇಕ್ಷಕರ ಗ್ಯಾಲರಿಯಲ್ಲಿ ಕುಳಿತುಕೊಳ್ಳುತ್ತಿದ್ದೆ. ಆಗ ಶ್ರೀಮಾನ್ ಶಂಕರಲಿಂಗೇಗೌಡರಿಗೂ ಮತ್ತು ಮಾಜಿ ಮಂತ್ರಿಗಳಾದ ಶ್ರೀ. ಟಿ. ಮರಿಯಪ್ಪನವರಿಗೂ ಆಗಾಗ್ಗೆ ಬೀಳುತ್ತಿದ್ದಂಥ ಪಾದ—ವಿವಾದಗಳ ಸರಣಿಯು ಬಹಳ ಆನಂದವಾಗಿರುತ್ತಿತ್ತು ಮತ್ತು ಬಹಳ ಅರ್ಥಗರ್ಭಿತವಾಗಿಯೂ ಇರುತ್ತಿತ್ತು. ಇವರು ಅಂಕಿ ಅಂಶಗಳನ್ನು ಎತ್ತಿಹಿಡಿದು ಬಹಳ ಸಮಂಜಸವಾದ ಪ್ರಶ್ನೆಗಳನ್ನು ಹಾಕುತ್ತಿದ್ದರು. ಇವುಗಳಿಗೆ ಬರುತ್ತಿದ್ದ ಉತ್ತರಗಳೂ ಸಹ ಅಷ್ಟೇ ಸಮಂಜಸವಾಗಿರುತ್ತಿದ್ದವು. ಇದರಿಂದ ನಮಗೆ ಏನೊಂದು ಪಾಠ ಗೊತ್ತಾಗುತ್ತದೆಯೆಂದರೆ, ರಾಜಕೀಯ ರಂಗದಲ್ಲಿ ಸೇವೆಮಾಡತಕ್ಕವರು ಸರ್ಕಾರಕ್ಕೆ ರಚನಾತ್ಮಕ ಸಲಹೆಗಳನ್ನು ಯಾವ ರೀತಿಯಲ್ಲಿ ಕೊಟ್ಟು, ಕೆಲಸ ಕಾರ್ಯಗಳನ್ನು ಪ್ರೋತ್ಸಾಹಿಸಬೇಕೆಂಬುದೂ ಮತ್ತು ವ್ಯರ್ಥಾ ಪ್ರತಿಯೊಂದು ಹೆಜ್ಜೆ ಹೆಜ್ಜೆಗೂ ಟೀಕೆಗಳನ್ನು ಮಾಡಿಕೊಂಡುಹೋಗುತ್ತ ಕೇವಲ ವಿರೋಧಾಭಿಪ್ರಾಯವನ್ನೇ ಬಲಪಡಿಸುವುದು ಸಾಧುವಾದುದ್ದಲ್ಲ ಎಂಬುದು; ಈ ಅಂಶಗಳು ಶ್ರೀಮಾನ್ ಶಂಕರಲಿಂಗೇಗೌಡರ ಪಾದ ಸರಣಿಯಲ್ಲಿ ಎದ್ದುಕಾಣುತ್ತಿದ್ದವು. ಇಂಥ ಒಂದು ಪಾಠವನ್ನು ಅವರು ನಮಗೆಲ್ಲಾ ಹಾಕಿಕೊಟ್ಟು ತೋರಿಸುತ್ತಿದ್ದರು. ಹೀಗೆ ಅವರು ಸುಮಾರು ಒಂದು ಕಾಲು ಶತಮಾನ ರಾಜಕೀಯ ರಂಗದಲ್ಲಿದ್ದುಕೊಂಡು ನಮಗೆಲ್ಲ ಒಂದು ಆದರ್ಶ ಮಾರ್ಗವನ್ನು ಹಾಕಿಕೊಟ್ಟು ಹೋಗಿದ್ದಾರೆ. ಅದರಲ್ಲಿ ಎಂಥ ಗುಣಗಳೇ ಇರಲಿ 'ಗುಣಕ್ಕೆ ಮಾತ್ಸರ್ಯವಿಲ್ಲ' ಎಂಬ ಅಂಶವನ್ನು ಗಮನದಲ್ಲಿಟ್ಟುಕೊಂಡು, ರಚನಾತ್ಮಕ ದೃಷ್ಟಿಯಲ್ಲಿ ಹೇಗೆ ಕೆಲಸಮಾಡಬೇಕೆಂಬು

(ಶ್ರೀ ಬಿ. ಟಿ. ಕೆಂಪರಾಜ್).

ದರ ಬಗ್ಗೆ ಒಂದು ಗುರುತನ್ನು ಮಾಡಿಕೊಟ್ಟು ಹೋಗಿದ್ದಾರೆ. ಇಂಥ ವ್ಯಕ್ತಿಗಳು ಹಿಂದಿರಲಿಲ್ಲ ಮತ್ತು ಇನ್ನು ಮುಂದಕ್ಕೆ ಬರಲಾರರೆಂದು ನಾನು ತಮ್ಮಲ್ಲಿ ವಿನ್ನವಿಸಿಕೊಳ್ಳುತ್ತೇನೆ. ಇವರು ಜೀವಂತರಾಗಿದ್ದ ಕಾಲದಲ್ಲಿ ನಾಗಮಂಗಲಕ್ಕೆ ನೀರಿನ ಸೌಕರ್ಯವಿಲ್ಲವೆಂದೂ ಅದನ್ನು ಆ ತಾಲ್ಲೂಕಿಗೆ ಕಲ್ಪಿಸಿಕೊಡಬೇಕೆಂದೂ ಬಹಳ ದಿನಗಳಿಂದಲೂ ಸರ್ಕಾರದಲ್ಲಿ ಹೊಡೆದಾಡುತ್ತಿದ್ದರು. ಈಗಲಾದರೂ ತಾವು ಅವರ ಮಹತ್ವದ ಕೋರಿಕೆಯಂತೆ, ಅವರು ಪರಲೋಕವನ್ನು ಸೇರಿದ ಮೇಲಾದರೂ ಅವರ ಮನೋಭೀಷ್ಟವನ್ನು ನೆರವೇರಿಸಿ, ಅಲ್ಲಿಗೆ ನೀರಿನ ನರಬರಾಯಿಯನ್ನು ಒದಗಿಸಿಕೊಟ್ಟರೆ ಅವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಿದಂತಾಗುತ್ತದೆ. ಅವರು ಜೀವಂತರಾಗಿದ್ದಿದ್ದರೆ ಈ ಸಭೆಯ ಮುಂದೆ ಅವರು ಯಾವ ಯಾವ ನೀರಾವರಿ ಯೋಜನೆಗಳನ್ನು ಇಡುತ್ತಿದ್ದರೋ ಅಥವಾ ಈ ಹಿಂದೆ ಇಟ್ಟಿದ್ದಾರೆಯೋ ಅಂಥವುಗಳನ್ನು ಬೇಗ ತಾವು ಕಾರ್ಯರೂಪಕ್ಕೆ ತಂದಲ್ಲಿ ಅವರ ಆತ್ಮಕ್ಕೆ ಶಾಂತಿಯನ್ನುಂಟುಮಾಡಿದಂತಾದೀತೆಂಬ ಅಂಶವನ್ನು ನಾನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತಂದಿಟ್ಟು ಸುತ್ತೇನೆ ಮತ್ತು ತಮ್ಮನ್ನು ಹಾಗೆ ನಡೆಸಬೇಕೆಂದು ಪ್ರಾರ್ಥಿಸಿಕೊಳ್ಳುತ್ತೇನೆ.

ಇನ್ನು ಮೂರನೆಯದಾಗಿ, ಶ್ರೀಯುತ ಕೃಷ್ಣಸ್ವಾಮಿ ಪಿಳ್ಳೈಯವರನ್ನು ನಾನು ಸುಮಾರು 15-20 ವರ್ಷಗಳಿಂದಲೂ ಚೆನ್ನಾಗಿ ಬಲ್ಲೆ. ಅವರು ನನಗೆ ಕೇವಲ ಸಮಾಪದ ವ್ಯಕ್ತಿಗಳೂ ನಹ ಆಗಿದ್ದರು. ಅವರು ಬೆಂಗಳೂರು ಸಿಟಿ ಮುನಿಸಿಪಾಲಿಟಿಗೆ ಕೌನ್ಸಿಲ್ ರಾಗಿದ್ದುಕೊಂಡು ಮತ್ತು ಹಿಂದಿನ ಪ್ರಜಾಪ್ರತಿನಿಧಿ ಸಭೆಯ ನದಸ್ಯರಾಗಿದ್ದು ಅನೇಕ ರೀತಿಯಲ್ಲಿ ಬಡ ಬಗ್ಗರಿಗೆ ಅನೇಕ ನಹಾಯಗಳನ್ನು ಕಲ್ಪಿಸಿಕೊಟ್ಟಿರುತ್ತಾರೆ. ಕಾರ್ಮಿಕರಿಗೆ ಅನೇಕ ನಹಾಯಗಳನ್ನು ಕಲ್ಪಿಸಿಕೊಟ್ಟಿದ್ದಾರೆ. ಶ್ರೀರಾಂಪುರದಲ್ಲಿ ಒಂದು ಶ್ರೀರಾಮದೇವರ ದೇವಾಲಯವನ್ನು ಕಟ್ಟಿಸಿದ್ದಾರೆ. ಆ ದೇವಸ್ಥಾನದ ಅಸ್ತಿಭಾರಶಿಲೆಯನ್ನು ಹಾಕಿಸಲು ಶ್ರೀಮಜ್ ಮಹಾರಾಜರವರನ್ನು ಕರೆಸಿಕೊಂಡು ಆ ಕೆಲನ ನೆರವೇರಿಸಿದ್ದಾರೆ. ಹೀಗೆ ಇವರು ಅನೇಕ ನಾರ್ವಜನಿಕ ನೇವೆಗಳನ್ನು ಎನಗಿದ್ದಾರೆ. ಇವರು ನಮ್ಮ ಶ್ರೀ ವಿ. ಆರ್. ನಾಯ್ಡುರವರಿಗೆ ಆಗಾಗ್ಗೆ ವಿರೋಧವಾಗಿ ಚುನಾವಣೆಗೆ ನಿಲ್ಲುತ್ತಿದ್ದರು. ಈ ಹಿಂದೆ ಕಾರ್ಪೋರೇಷನ್ನಿಗೆ ನಿಂತಿದ್ದರು. ಆದರೆ ಗೆಲ್ಲಲಾಗಲಿಲ್ಲ. ಹಾಗೆಯೇ ಶಾಸನ ನಭೆಯ ಚುನಾವಣೆಯಲ್ಲೂ ಅವರು ನಿಂತಿದ್ದರು. ದೈವವಶಾತ್ ಅವರು ಜಯಶಾಲಿಗಳಾಗಲಿಲ್ಲ. ಈ ರೀತಿಯಾಗಿ ವಿರೋಧ ಪಕ್ಷದಲ್ಲಿದ್ದರೂ ಅವರು ಕಾಂಗ್ರೆಸ್ಸಿನ ವಿಷಯದಲ್ಲಿ ಎಷ್ಟು ಪ್ರೇಮವಿಟ್ಟಿದ್ದರು, ಎಷ್ಟು ಸಹಕರಿಸಿ ಕೆಲನ ಮಾಡುತ್ತಿದ್ದರು ಮತ್ತು ನಾರ್ವಜನಿಕರಿಗೆ ಎಷ್ಟು ನೇವೆಮಾಡುತ್ತಿದ್ದರು ಎಂಬುದು ಅವರನ್ನು ಎಲ್ಲರಿಗೂ ಅಚ್ಚುಮೆಚ್ಚಾಗಿ ಮಾಡಿತ್ತು. ಇಂಥ ವ್ಯಕ್ತಿಯನ್ನು ಕಳೆದುಕೊಂಡಿರುವುದು ಎಲ್ಲರಿಗೂ ಶೋಕವನ್ನುಂಟು ಮಾಡತಕ್ಕಂಥ ಪ್ರನಂಗ.

Sri K. CHIKKALINGIAH (Malavalli—Scheduled Castes).—I move for closure.

Mr. SPEAKER.—Not in the midst of the speech.

ಇನ್ನು ಗಣ್ಯರಾದ ಮತ್ತು ವಿಶ್ವಪ್ರಖ್ಯಾತರಾದ ವ್ಯಕ್ತಿಗಳೆಂದರೆ ಶ್ರೀ ಎಚ್. ಜಿ. ಅಯ್ಯಂಗಾರ್ ರವರು. ಅವರ ರಾಜಕೀಯ ಶಕ್ತಿ ನೈಪುಣ್ಯತೆ ಹೊಗಳತಕ್ಕಂಥದಾಗಿತ್ತು ಮತ್ತು ನರ್ದಾರ್ ವಲ್ಲಭಾಯ್ ಪಟೇಲ್‌ರವರು ನತ್ಪನಮಯದಲ್ಲಿ, ಒಳಾಡಳಿತ ಶಾಖೆಯನ್ನು ನಿರ್ವಹಿಸಲು ನರಿಯಾದ ವ್ಯಕ್ತಿಗಳು ನಿಕ್ಕದಿದ್ದ ಆ ನಂದರ್ಭದಲ್ಲಿ, ಅವರು ಆ ಆಡಳಿತವನ್ನು ವಹಿನಿಕೊಂಡು ಹೆಚ್ಚಿನ ದಕ್ಷತೆಯಿಂದ ಕಾರ್ಯಭಾರವನ್ನು ನಿರ್ವಹಿನಿದರು. ಅದೂ ಅಲ್ಲದೆ ರಕ್ಷಣಾ ಮಂತ್ರಿಗಳಾಗಿ ಅವರು ಅತ್ಯುನ್ನತ ನೇವೆಯನ್ನು ಹಿಂದೂದೇಶಕ್ಕೆ ನಲ್ಲಿನಿದರು. ಈ ರೀತಿಯಾಗಿ ದೊಡ್ಡರಾಜಕಾರಣ ಪಟುಗಳು ಮತ್ತು ದಕ್ಷರಾದ ವ್ಯಕ್ತಿಗಳನ್ನು ಕಳೆದುಕೊಂಡದ್ದು ನಮ್ಮ ದೇಶಕ್ಕೇ ಅಲ್ಲ ಇಡೀ ಪ್ರಪಂಚಕ್ಕೇ ದಾರ್ಭಾಗ್ಯವೆಂದು ಹೇಳಬೇಕಾಗಿದೆ. ಆದ್ದರಿಂದ ಈ ಮಹನೀಯರ ಆತ್ಮಕ್ಕೆ ಭಗವಂತನು ಶಾಂತಿಯನ್ನೂ ಮತ್ತು ಮೋಕ್ಷವನ್ನೂ ಕೊಡಲಿ ಎಂದು ಪ್ರಾರ್ಥಿಸಿ, ಅವರ ಮರಣಗಳಿಂದ ನೊಂದ ಬಂಧು ಮಿತ್ರರಿಗೆ ಆ ವ್ಯನನವನ್ನು ತಡೆದುಕೊಳ್ಳಲಿಕ್ಕೆ ನಾಕಷ್ಟು ಶಕ್ತಿಯನ್ನು ಕರುಣಿನಲಿ ಎಂದು ಬಯನುತ್ತೇನೆ.

ಶ್ರೀ ಸಿ. ಟಿ. ಹನುಮಂತಯ್ಯ (ಪಾವಗಡ—ಅನುನೂಚಿತ ಜಾತಿಗಳು).—ಅಧ್ಯಕ್ಷರೇ, ಈ ಐದು ಜನ ವಿಭೂತಿ ಪುರುಷರೂ ನೇಶಕ್ಕಾಗಿ ದುಡಿದು ಕಣ್ಮರೆಯಾಗಿದ್ದಾರೆ. ಅವರ ಆತ್ಮಕ್ಕೆ ದೇವರು ಶಾಂತಿಯನ್ನಿಯಲಿ, ಅವರ ಕುಟುಂಬದವರಿಗೆ ಉಂಟಾಗಿರುವ ಶೋಕವನ್ನು ಪರಿಹರಿನಲಿ. ಅವರುಗಳು ಎಷ್ಟು ಶೋಕದಲ್ಲಿದ್ದಾರೆಂಬುದನ್ನು ಹೇಳುವುದಕ್ಕೇ ತೋರದಾಗಿದೆ.

ಇನ್ನೀಗ ಶ್ರೀಮಾನ್ ಶಂಕರಲಿಂಗೇಗೌಡರ ನಿಧನದ ವಿಷಯದಲ್ಲಿ ಕೊಂಚ ಪ್ರನ್ತಾಪಿನಲಿಚ್ಛಿನುತ್ತೇನೆ. ಶ್ರೀಮಾನ್ ಶಂಕರಲಿಂಗೇಗೌಡರೂ ನಾನೂ 1935 ನೆಯ ಇನವಿಯಿಂದ ಪರಿಚಿತರು. ಅವರು ವಿದ್ಯಾವಂತರು, ಬುದ್ಧಿವಂತರು, ರಾತ್ರಿಯೆಲ್ಲಾ ಓದಿ ಅಂಕಿ ಅಂಶಗಳನ್ನು ತಂದು ನಮ್ಮ ಮುಂದಿಡುತ್ತಿದ್ದರು. ಅವರು ಹಾನ್ಯ ರೂಪವಾಗಿ ಏನನ್ನು ಹೇಳಿದರೂ ಕೂಡ, ಆ ಹಾನ್ಯದ ಮಧ್ಯದಲ್ಲಿ ತಿರಳೂ ಇರುತ್ತಿತ್ತು. ರಾತ್ರಿಯೆಲ್ಲಾ ಅನೇಕ ಪುನ್ತಕಗಳನ್ನು ಓದಿ ನಮ್ಮಗಳಿಗಾಗಿ ಅಂಕಿ ಅಂಶಗಳನ್ನು ತಂದು ನಹಾಯಮಾಡುತ್ತಿದ್ದರು. ಕೆಲವು ನಂದರ್ಭಗಳಲ್ಲಿ ಹರಿಜನರ ವಿಷಯದಲ್ಲಿ ಸಿಕ್ಕಿದಂತೆ ಮನಸ್ಸಿಗೆ ಬಂದ ಹಾಗೆ ಬೈಯುತ್ತಿದ್ದರು. ಹಾಗೆ ಬೈದರೂ ಕೂಡ ಅದು ಒಳ್ಳೆಯದಕ್ಕೇ ಎಂದು ಹೇಳುತ್ತಿದ್ದರು. ಹರಿಜನರು ಅಭಿವೃದ್ಧಿಯಾಗಬೇಕಾದರೆ ಅವರು ಅವರ ಕಾಲಮೇಲೆ ನಿಂತುಕೊಳ್ಳಬೇಕೆಂದು ಅವರು ವಾದಿನುತ್ತಿದ್ದರು. ಅದು ನಿಜ. ಅವರು 'ನಿಮ್ಮ ಜನರು ಏನೇನು ಪ್ರಯತ್ನಗಳನ್ನು ಮಾಡಬೇಕೋ, ನಾರ್ವಜನಿಕ ಸಭೆಯ ಮುಂದೆ ಏನೇನು ಇಡಬೇಕೋ ಅದನ್ನು ಇಡುತ್ತಿಲ್ಲ, 14 ಲಕ್ಷ ಜನರಿದ್ದರೂ ನಿಮ್ಮ ಜನರು ಏಳಿಗೆಗೆ ಬರಬೇಕೆಂದರೆ ಎಷ್ಟು ಪ್ರಚಾರಕಾರ್ಯದಲ್ಲಿ ತೊಡಗಬೇಕೋ ಅಷ್ಟು ಮಾಡುತ್ತಿಲ್ಲ" ಎಂದು ಒಳ್ಳೆಯ ಬುದ್ಧಿವಾದ ಹೇಳುತ್ತಿದ್ದರು. ಪ್ರಜಾಪ್ರತಿನಿಧಿ ಸಭೆಯಲ್ಲಿ ಯಾವಾಗ ನೋಡಲಿ, ಉಪ್ಪಾರರ ವಿಷಯವಾಗಿ ಅವರೊಂದು ವಾದವಿರುತ್ತಿತ್ತು. ಉಪ್ಪಾರ ಜನಾಂಗಕ್ಕೆ ಪ್ರಾತಿನಿಧ್ಯವಿಲ್ಲ, ಅವರನ್ನು ಕೇಳುವುದಕ್ಕೇ ಇಲ್ಲವೆಂದು ಅವರು ಅನೇಕ ನಂದರ್ಭಗಳಲ್ಲಿ ಹೇಳುತ್ತಿದ್ದರು. 'ಉಪ್ಪಾರ ಜನಾಂಗದವರಿಗೆ ಈಗಲಾದರೂ ಏನಾದರೂ ಮಾಡಿ; ಅವರಲ್ಲಿ ಅನೇಕರು ಹಿಂದೆ ಓದ್ದಿದ್ದಾರೆ, ಕಾರಣ, ಅವರಿಗೆ ಹೆಚ್ಚಿಗೆ ಪ್ರಾತಿನಿಧ್ಯ ಈ ಸಭೆಯಲ್ಲಿ ಕೊಟ್ಟಿಲ್ಲ. ಇನ್ನುಮೇಲಾದರೂ

ಕೊಡಿ ' ಎಂದು ಸುಮ್ಮನಸುಮ್ಮನಾದರೂ ಪದೇ ಪದೇ ಕೇಳುತ್ತಿದ್ದರು. ಅದಕ್ಕೆ ಸರ್ಕಾರದವರು ಏನಾದರೂ ಉದಾಸೀನವಾಗಿ ಉತ್ತರ ಹೇಳಿದರೆ, ' ನಾನು ಇದನ್ನು ಇಲ್ಲಿಗೇ ಬಿಟ್ಟುಹೋಗುವ ಹಾಗಿಲ್ಲ, ನನಗೆ ಏನಾದರೂ ಸರಿಯಾದ ಉತ್ತರ ಕೊಟ್ಟೇ ಕೊಡಬೇಕು, ಕಡೆಗೆ ಒಂದು ಅಸಿಸ್ಟೆಂಟ್ ಕಮೀಷನರಗಿರಿಯನ್ನಾದರೂ ಅವರಲ್ಲೊಬ್ಬರಿಗೆ ಕೊಡಿ, ನಾನದನ್ನು ಕಣ್ಣಾರೆನೋಡ ಬೇಕು' ಎಂದು ಹೇಳುತ್ತಿದ್ದರು. ಈ ರೀತಿಯಾಗಿ ದೇಶಕ್ಕೆ ಅನೇಕ ಸೇವೆ ಸಲ್ಲಿಸಿ ಹೋಗಿದ್ದಾರೆ. ಆದ್ದರಿಂದ ಶಂಕರಲಿಂಗೇಗೌಡರ ಆತ್ಮಕ್ಕೆ ಶಾಂತಿಯನ್ನು ಭಗವಂತನು ಕೊಡಲೆಂದು ಪ್ರಾರ್ಥಿಸಿ, ಈ ಐದು ಜನರ ಕುಟುಂಬ ವರ್ಗದವರಿಗೂ ದೇವರು ಅಮರಾರೋಗ್ಯ ಐಶ್ವರ್ಯಾಭಿವೃದ್ಧಿಯನ್ನುಂಟುಮಾಡಲೆಂದು ಬಯಸುತ್ತೇನೆ.

Mr. SPEAKER.--The President Dr. Rajendra Prasad in his message of condolence has said that Marshal Stalin was a world figure of outstanding greatness. Prime Minister Pandit Nehru in his message has stated that Marshal Stalin was a personality of exceptional gifts and great achievements. Dr. Radhakrishnan, the Chairman of the Council of States, has stated the other day that Stalin's great ambition was to leave his country, when he died, not in peril but in peace. That ambition has been fulfilled. We all know that Stalin is the maker of modern Russia.

Regarding late Sri N. Gopalaswami Ayyangar, brilliant as he was, he began his career as an Assistant Professor. Within a year or so he entered the Madras Civil Service and served that State and the people there in various departments for nearly 32 years. After retirement, he became the Dewan of Kashmir and he served that State and the people of Kashmir during that period between 1937 and 1942. Thus it is clear that he had to his credit a life time of distinguished service under the British Government. After India attained independence, he entered the Central Cabinet in 1947 and he is one of the framers of the Constitution of India. I very well remember, when I attended two or three meetings or conferences, whatever you call them, under his Chairmanship, that took place in Madras and Delhi, I was able to make out that as a Union Transport Minister he was largely responsible for increasing the administrative fficiency and conveniences of the country's railways by integrating and also re-grouping on the zonal system. As the Defence Minister in the reconstituted Central Cabinet after the general elections, he served the country and the people till his last breath. In short, he was known as a great gentleman and a great patriot as well as a great administrator and a far-sighted statesman.

I associate myself with the sentiments expressed by the several Hon'ble Members of this House regarding the late lamented Sri Sankaralinge Gowda. Many of us are aware of how Sri Sankaralinge Gowda was fond of statistics. He used to take extraordinary pains in calculating them and on the basis of those statistics, he used to write a series of articles and books. He has served this State and certain other parts of India in his own way in several capacities.

I regret to hear the deaths of Sri Krishnaswami Pillay and Sri Pathi Basappa who were members of the Representative Assembly in the past.

Our sincere condolences and deep sympathy go for the bereaved family members of these departed souls. May I request the House to stand in silence for a few minutes as a mark of respect to these departed souls ?

The House stood up for a few minutes in silence as a mark of respect to the departed souls.

PAPERS LAID ON THE TABLE.

(1) *Mysore Alienated Villages (Protection of Tenants and Miscellaneous Provisions (Amendment) Ordinance, 1952.*

Mr. SPEAKER. - There are two or three formal things to be done now. Some papers ought to be placed on the table of the House.

As required by the provisions of the Constitution, I call upon Sri Kadidal Manjappa to lay on the table of the